ಕೊರವಂಜಿ



ನವೆಂಬರ್ ೧೯೪೩

ಮಾಸ ಪತ್ರಿಕೆ

ಸಂಪಾದಕರು :
ಶ್ರೀ|| ರಾ. ಶಿ.

ಚಿತ್ರಕಾರರು :
ಶ್ರೀ|| ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ|| ನಾ. ಕ.
ಶ್ರೀ|| ಖಾರಾಂತ
ಶ್ರೀ|| ಎಸ್. ಎನ್. ಶಾಸ್ತ್ರಿ
ಶ್ರೀ|| ಶಿವಯ್ಯ
ಶ್ರೀ|| ಅ. ಸೋಗಾಲ
ಶ್ರೀ|| ಎಸ್. ಎನ್. ಶಿ.
ಶ್ರೀ|| ಬುಳ್ಳ
ಶ್ರೀ|| ಎಚ್. ಜಿ. ಗಂಗಾಧರ
ಶ್ರೀ|| ಕೇಫ

ಬಿಡಿ ಪತ್ರಿಕೆ -- ಕೇವಲ ಎರಡಾಣೆ

ತಿಳಿನಗೆಯ ಮಾಸ ಪತ್ರಿಕೆ.

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦

ಬಿಡಿ ಪ್ರತಿ ಕೇವಲ ಆಣೆ ೦—೨—೦

ವಿಷಯಾನುಕ್ರಮಣಿಕೆ

ಪಂತುಲಮ್ಮ

ಸಾರಥಿಯವರ ಉತ್ತಮ ತಯಾರಿಕೆ

●

— ದಿಗ್ದರ್ಶಕರು —

ಶ್ರೀ ರಾಮಬ್ರಹ್ಮಂ

●

ಮೂವಿಲ್ಯಾಂಡಿನಲ್ಲಿ

ಪ್ರದರ್ಶಿಸುವ ತಾರೀಖನ್ನು ಎದುರು ನೋಡಿ

ವಿವರಗಳಿಗೆ—

ಚಂದ್ರ ಫಿಲ್ಮ್ಸ್ ಲಿಮಿಟೆಡ್

ಗಾಂಧಿನಗರ, ಬೆಂಗಳೂರು

— ಇವರಿಗೆ ಬರೆಯಿರಿ

ಜಬ್ ಕೊ

ಸುಪ್ರಸಿದ್ಧ ಭಾರತೀಯ
ತಯಾರಿಕೆಗಳ ಅಂಕಿತ.
ಅವುಗಳು ಉತ್ಕೃಷ್ಟತೆ
ಬೆಲೆ ಇವುಗಳನ್ನು ಸರಿತೂಗಿಸುತ್ತ**ವೆ.**
ಪರದೇಶೀಯರಿಂದಲೂ
ಮನ್ನಣೆ ಪಡೆದಿರುವುವು.



ಸಂಪುಟ ೨] ಕೊರವಂಜಿ—ನವೆಂಬರ್ ೧೯೪೩ [ಸಂಚಿಕೆ ೮

ಕುಹಕಿಡಿಗಳು

ಹೊರಗಿನಿಂದ ದವಸಧಾನ್ಯಗಳು ದೆಹಲಿಗೆ ಈಗ ಬಂದಿವೆಯಂತೆ. ನಮ್ಮ ಸರಬರಾಜು ಮಂತ್ರಿಗಳೂ ದೆಹಲಿಗೆ ಹೋಗಿರುವರು—ಬದುಕಿದೆವಪ್ಪಾ.

✤ ✤ ✤

ನಮ್ಮ ಅಧಿಕಾರಿಗಳು 'ಬೆಣ್ಣೆಯಂತಹ ಮನುಷ್ಯರು' ಎಂದು ನೌಕರರ ಹೇಳಿಕೆ.

—ಅದಕ್ಕೇ ಹಾಗೆ ಜಾರಿಕೊಳ್ಳುತ್ತಾರೆ ಅವರು.

✤ ✤ ✤

ಹೊಟ್ಟೆಗಿಲ್ಲದವರ ಕಣ್ಣೀರಿನಿಂದ ಕೆರೆಕಟ್ಟೆಗಳು ಒಡೆದುವೆಂಬುದು ನಿರಾಧಾರವಾದುದು.

—ಕಣ್ಣೀರು ಕೂಡ ಬರುವಷ್ಟು ತ್ರಾಣವಿಲ್ಲ.

✤ ✤ ✤

ಲಾರ್ಡ್ ವೇವೆಲ್ಲರು ಸೂತ್ರವನ್ನು ವಹಿಸಿಕೊಂಡರಂತೆ.

—ರಾಮೋ ಸ್ವಸ್ತಿ—ವೇವೆಲ್ಲೋ ಸ್ವಸ್ತಿ.

✤ ✤ ✤

ಕಣ್ಣು ಹೋದವರಿಗೆ ಡಾರ್ಜಲಿಂಗ್‌ನಲ್ಲಿ ಶಿಕ್ಷಣಾಶಾಲೆಯನ್ನು ಏರ್ಪಡಿಸಿದ್ದಾರಂತೆ.

—ನಮ್ಮ ರಾಜಕಾರಣ ಪಟುಗಳಲ್ಲಿ ಹಲವರಾದರೂ ಅಲ್ಲಿಗೆ ಹೋಗಿ ಶಿಕ್ಷಣ ಪಡೆಯಬಾರದೇ ?

ದೀಪಾವಳಿಗೆ ಅಳಿಯ ಮನೆಗೆ ಬಂದಿದ್ದಾನಂತೆ.

—ಸಿಡಿಲು ಪಟಾಕಿ ಇಲ್ಲದಿದ್ದರೂ, ಅಳಿಯ ಸಿಡಸಿಡಗುಟ್ಟುತ್ತಾನಲ್ಲಾ.

✤ ✤ ✤

ಕೃಷ್ಣಮೆನನ್ನರು ಶ್ರೀಯುತ ಅಮೆರಿಯವರನ್ನು ಕಂಡು ಮಾತನಾಡಿದರು.

—ಶುರುವಾಯಿತು ಹಳೇ ರಾಮಾಯಣ.

ಹರಸ್ವಾಭಾವ ನಿರತಂ । ಹರಸ್ವೀ ವಾಗ್ವಿದಾಂವರಂ ॥
ಅಮೆರಿ ಪರಿಪ್ರಪ್ರುಚ್ಛ । ಭಾರತಃ ಪುತ್ರ ಪುಂಗವಂ ॥

✤ ✤ ✤

ನಮ್ಮೂರಿನಲ್ಲಿ ನಾಲ್ಕುಕ್ಕೊಂದರಂತೆ ಅಲಾರಂ ಗಡಿಯಾರಗಳಿವೆಯಂತೆ ಈಗ.

— ಈಗಲಾದರೂ ನಮ್ಮೂರಿನವರು ಎಚ್ಚೆತ್ತಿರುವರಲ್ಲ.

✤ ✤ ✤

ಮೊನ್ನೆ ದಿನ ನಡೆದ ಕಳ್ಳತನದಲ್ಲಿ, ಜವಾಹಿರಿ ವ್ಯಾಪಾರಿಗಳು ಕಳೆದುಕೊಂಡ ಸಾಮಾನುಗಳು—ನಾಲ್ಕು ಪಾವು ಚಿನ್ನ, ಒಂದು ವಜ್ರದ ಮೂಗುತಿ, ಎರಡು ಸೇರು ಅಕ್ಕಿ.

✤ ✤ ✤

ಮೊನ್ನೆ ಮದ್ರಾಸಿನ ಮೇಲೆ ಬಾಂಬುಗಳು ಬಿದ್ದವಂತೆ.

—ಆದರೂ ಮದ್ರಾಸಿನಲ್ಲಿ ಮನೆ ಬಾಡಿಗೆ ಇಳಿದಿಲ್ಲವಂತೆ.

✤ ✤ ✤

ಆಂಧ್ರ ಮಹಾ ಸಭೆಯು ಬಳ್ಳಾರಿಯಲ್ಲೂ ನಡೆವುದಂತೆ.

—ಇದೇನೂ ನಮಗೆ ಹೊಸದಲ್ಲ—ನಮ್ಮ ಮನೆಯಲ್ಲಿ ಹಬ್ಬವಾದರೆ ಪಕ್ಕದ ಮನೆಯಲ್ಲೂ ಎಲೆ ಹಾಕುವುದಿಲ್ಲವೇ?

✤ ✤ ✤

ಯೂರೋಪಿನಲ್ಲಿ ಜರ್ಮನರು ಎಂದಿನಂತೆ ಹಿಮ್ಮೆಟ್ಟುತ್ತಾ ಇದ್ದಾರಂತೆ.

—ಹೀಗೆಯೇ ಹಿಮ್ಮೆಟ್ಟುತ್ತಾ ಹೋದರೆ, ಕಡೆಗೆ ಹಿಟ್ಲರನ ಮೇಲೆಯೇ ಮೆಟ್ಟುವಂತಾಗುತ್ತದೆ.

———o———

ಉರಿಗಾಳು

ಬರುಬರುತ್ತಾ ಕನ್ನಡ ಕವನಗಳು ಹೊಲಸಾಗುತ್ತಿವೆ ಎಂದು ಒಬ್ಬರು ಸಾರುತ್ತಾರೆ. ಮತ್ತೊಬ್ಬರು ಅದು ತೀರ ಅಸಾಧ್ಯವೆಂದು ಹೇಳುತ್ತಾರೆ.

✤ ✤ ✤

ಈಗ ಅನೇಕ ಮದರಾಸಿಗಳು ಬೆಂಗಳೂರಲ್ಲೇ ಜನಿಸುತ್ತಿದಾರೆ. ರೈಲು ಚಾರ್ಜು ಉಳಿಯುತ್ತೋ ಇಲ್ಲವೋ?

✤ ✤ ✤

ತಮ್ಮ ತಮ್ಮ ಮನೆ ತಾಪತ್ರಯಗಳನ್ನು ಕುರಿತು ಚರ್ಚೆ ಮಾಡುವುದಕ್ಕಾಗಿ ನಮ್ಮೂರು ಮಹಿಳಾ ಸಮಾಜದವರು ವಾರವಾರವೂ ಸಭೆ ಸೇರುತ್ತಿದ್ದಾರೆ ಅವು, ಪಾಪ, ಹೊರಗೆ ಕಾದು ಕುಳಿತಿರುತ್ತವೆ, ಮೀಟಿಂಗ್ ಮುಗಿಯುತ್ತಲೂ ಪತ್ನಿಯರನ್ನು ಮನೆಗೆ ಕರೆದುಕೊಂಡು ಹೋಗೋದಕ್ಕೆ.

✤ ✤ ✤

ಮಿ|| ಹರಿಶ್ಚಂದ್ರ ಎಂಬುವರೊಬ್ಬರು ಚಲನ ಚಿತ್ರವೊಂದರ ಪ್ರಚಾರ ಕಾರ್ಯಕ್ಕೆ ನಿಯಮಿತರಾಗಿದಾರೆ. ಪಾಪ! ಅವರಿಗೆ ಉಭಯ ಸಂಕಟ.

✤ ✤ ✤

ಪ್ರೈಮರಿ ಸ್ಕೂಲ್ ಮೇಷ್ಟರೊಬ್ಬರ ಮನೆಗೆ ಕಳ್ಳನೊಬ್ಬ ಕನ್ನ ಹಾಕಿದನಂತೆ. ಅವನಿಗೆ ಬುದ್ಧಿ ಸರಿಯಾಗಿಲ್ಲವೆಂದು ನ್ಯಾಯಾಧೀಶರು ಅವನನ್ನು ಬಿಡುಗಡೆ ಮಾಡಿದರಂತೆ.

✤ ✤ ✤

"ತಾನು ಬದುಕಿರುವಾಗ ತನಗೆ ಸಲ್ಲಬೇಕಾದ ಗೌರವ ಯಾವ ಕವಿಗೂ ದೊರೆತಿಲ್ಲ!" ಸದ್ಯ, ಉಳಿದುಕೊಂಡರು. ಸತ್ತ ಮೇಲೆ, ಬೆಂಕಿ ಬಿದ್ದು ಹೋಗಲಿ, ಅವರಿಗೇನು?

✤ ✤ ✤

ಚಲನ ಚಿತ್ರಗಳು ೧೧,೦೦೦ ಅಡಿಗಿಂತ ಉದ್ದವಾಗಿರಬೇಕೆಂದೂ ಶ್ರೀ|| ವಾರ್ಸ ಅವರ ವಾದ ಸಾಧುವಾದದ್ದೆಂದೂ ನಮ್ಮೂರಿನ ನವ ದಂಪತಿಗಳನೇಕರು ಅಭಿಪ್ರಾಯ ಪಡುತ್ತಾರೆ.

✤ ✤ ✤

"ನಿಮ್ಮ ದನಕರುಗಳನ್ನು ನೀವು ನಿಮ್ಮ ಮಕ್ಕಳಹಾಗೆ ಪೋಷಿಸಬೇಕು" ಎಂದು ಗ್ರಾಮ ಪುನರುಜ್ಜೀವಕರೊಬ್ಬರು ಭಾಷಣ ಮಾಡಿದಾಗ, ರೈತರೆಲ್ಲರೂ "ಸಾಕೆ, ಸ್ವಾಮಿ!" ಅಂದರಂತೆ.

* * *

ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನಕ್ಕೆ ಹಲವು ಸದಸ್ಯರುಗಳು ಕೇವಲ ಈಗಿನ ಆಹಾರ ಸಮಸ್ಯೆಯ ಪರಿಹಾರದ ದೃಷ್ಟಿಯಿಂದಲೇ ಆಗಮಿಸಿದ್ದರಂತೆ.

—o—

ಶ್ರೀ|| ಕೃಷ್ಣಾನಂದರವರು ಈ ಊರಲ್ಲಿಯೂ ಮೂರು ಕಡೆಗಳಲ್ಲಿ ಹಠ ಯೋಗದ ವಿಷಯವಾಗಿ ಉಪನ್ಯಾಸಗಳನ್ನು ಕೊಟ್ಟರು.

(ಬಾತ್ಮಿ)

ಹಠ ಅಂದರೆ, ಇದು.

* *

ದಂಡ ಪಿಂಡ ತಿಂಬುವನೇ ದಾಂಡಿಗ; ಮದ ತುಂಬಿದವನೇ ಮಾದಿಗ; ಗುಳಿಯೊಳಗೆ ರಾಗಿಯನು ಮರೆಸುವವನೇ ಗುಳಿಗ: ಕೋಡು ಕೋಡು ಎಂದು ಬೇಡುವವನೇ ಕೋಡಗ; ನಾಡಿಂಗೆ ಬೀಡಿಂಗೆ ನಲ್ನುಡಿಯ ನುಡಿಯುವವನೇ ನಾಡಿಗನೆಂದಳು ನಮ್ಮ ಅಪರಂಜಿಯು ಕೊರವಂಜಿ ದೇವಿ.

(ವಚನ)

* *

ಸೆಪ್ಟೆಂಬರ್ ತಿಂಗಳ ಮೂರನೆಯ ವಾರದಲ್ಲಿ ಪಂಕಜ ಮಲ್ಲಿಕ್‌ರು ಬೆಂಗಳೂರು ಮೈಸೂರು ನಗರಗಳಿಗೆ ಭೇಟಿ ಕೊಡುವ ಕಾಲದಲ್ಲಿ ಸಾರ್ವಜನಿಕರು ಯಾರೂ "ಪ್ರಿಯಾ ಮಿಲನಕೊ ಜಾನಾ" ಮತ್ತು "ಚಲೆ ಪವನಕಿ ಜಾ" ಎಂಬ ಹಾಡುಗಳನ್ನು ಹಾಡಕೂಡದೆಂದು ಪಂಕಜ ರಕ್ಷಣಾ ಶಾಸನದ ೨ನೆ ಕಲಂನಂತೆ ಕೋರಲಾಗಿದೆ.

* *

ಅ ನ ರ್ಥ ಕೋ ಶ

ಅ—ಇದೇ ಅರ್ಥಕೋಶದ ಮೊದಲನೆಯ ಅಕ್ಷರ. "ಅಕಾರಾಣಾಂ ಅಕಾರೋಸ್ಮಿ" ಎಂದು ಭಗವಂತನು ಹೇಳಿರುವುದು ಇದನ್ನೇ! ಯಾವುದನ್ನೂ ಇಲ್ಲ ಎನಿಸುವುದೇ ಇದರ ಮುಖ್ಯ ಕರ್ತವ್ಯ. ಅಹಿತ-ಹಿತವಲ್ಲದ್ದು. ಅದರ-ದರವಿಲ್ಲದ್ದು. ಅಮರ-ಮರವಲ್ಲದ್ದು........ಇತ್ಯಾದಿ. ಅಮೇರಿಕಾ, ಅಜಾಮಿಳ ಮುಂತಾದವುಗಳನ್ನೂ ನೋಡಿ.

ಅಕಾಲ ಮರಣ—ಡಾಕ್ಟರುಗಳ ಕೈವಾಡವಿಲ್ಲದೆ ಮರಣವಾದರೆ, ಅಕಾಲ ಮರಣ ಎನ್ನುತ್ತಾರೆ. ಈ ರೀತಿಯ ಮರಣದಿಂದ ನೆಂಟರಿಷ್ಟರ ಕಾಟ ಕಡಿಮೆ; ದೇಹ ಶ್ರಮವೂ ಕಡಿಮೆ; ಖರ್ಚಂತೂ ಇಲ್ಲವೇ ಇಲ್ಲ.

ಅಕಸ್ಮಾತ್—ಚಾಕರಿಗಳ ಮೂಲಕ ಉಪಜೀವನ ನಡೆಸುವವರ ಮೂಲ ಮಂತ್ರ. ಯಾವುದನ್ನು ಮರೆತರೂ, "ಅಕಸ್ಮಾತ್" ಮರೆತುಹೋಯಿತು, ಸಾರ್! ಯಾವುದು ತಪ್ಪಿದರೂ, "ಅಕಸ್ಮಾತ್ ತಪ್ಪಿಹೋಯಿತು ಸಾರ್" ಎಂದು ಹೇಳುತ್ತಾ ಬಂದರೆ, ಅಕಸ್ಮಾತ್ ನಂಬಿದರೂ ನಂಬಬಹುದು.

ಅಗಸ—ಕೇವಲ ಬಟ್ಟೆಗಳಿಂದಲೇ ಬಂಡೆಗಳನ್ನು ಪುಡಿ ಮಾಡಲು ಯತ್ನಿಸುವ ಮಡಿವಾಳ. ಕೊಟ್ಟಿದ್ದರಲ್ಲಿ ಅರ್ಧ ನೀರು ಪಾಲು, ಅರ್ಧ ಗಾಳಿ ಪಾಲು ಮಾಡಿ, ನಮ್ಮನ್ನು ಬಟ್ಟೆಗಾಣದೆ ಮಾಳ್ಪ ಮಹಾನುಭಾವ. "ಮಡಿ ಮಡಿ ಮಡಿ ಎಂದು ಅರಿವಿಯ ಹರಿಯುತಿ! ಮಡಿ ಮಾಡುವ ಬಗೆ ಬೇರುಂಟು" ಎಂದು ದಾಸರು ಹಾಡಿರುವುದು ಈತನನ್ನು ಕುರಿತೇ! ಈಚೆಗೆ ಈತ ಸಲೂನುಗಳನ್ನು ತೆರೆದು ತನ್ನ ಕೆಲಸಕಾರ್ಯಗಳನ್ನು ಮತ್ತಷ್ಟು ಸಾಂಗವಾಗಿ ನೆರವೇರಿಸುತ್ತಿದಾನೆ.

ಅಗಸೆ—ದ್ವಾದಶಿ ದಿನ ಬೆಳಗ್ಗೆ ಇದರ ಸೊಪ್ಪನ್ನು ಅನೇಕರು ಪಕ್ಕದ ಮನೆಗಳಿಂದ ತಂದು ಬೇಯಿಸಿ ತಿನ್ನುತ್ತಾರೆ.

ಅಠಾರ—ಒಂದು ಭಾರೀ ವಠಾರ; ಸಾವಿರಾರು ಜನರ ಅದೃಷ್ಟ ಕುಠಾರ.

ಅಠಾಣ—ಒಂದು ರೀತಿಯ ರಾಗ. ಇದನ್ನು ಎಳೆಯುವರು ನಮ್ಮಲ್ಲಿ ಅನೇಕರಿದಾರೆ. ಆದ್ದರಿಂದ ನಾವು ಬಹು ಎಚ್ಚರಿಕೆಯಿಂದಿರಬೇಕಾಗಿದೆ.

ಅರ್ಥಶಾಸ್ತ್ರ—ಬಂಡವಾಳಗಾರರ ಬೈಬಿಲ್ಲು. ಇದರ ಪ್ರವಚನದಿಂದ ಅನೇಕರಿಗೆ ಉಪಜೀವನ ಸಿಗುತ್ತಿದೆ.

ಅಸ್ಪೃಶ್ಯ—ಶಿಶುಸಾಹಿತ್ಯದ ಶಬ್ದ ವಿಶೇಷ.

ಅಮೇರಿಕಾ—ಗುಲಾಮತನವನ್ನು ತೊಡೆದುಹಾಕಿದ ನಂತರವೂ ಗುಲಾಮ ಸಂತತಿಯನ್ನು ಗುಲಾಮಿಸುತ್ತಿರುವ ದೇಶ. ಭಾರತಕ್ಕೆ ಕೂಡಲೇ ಸ್ವರಾಜ್ಯ ಕೊಡಬೇಕೆಂಬ ಅಭಿಪ್ರಾಯವುಳ್ಳವರು ಅಲ್ಲಿ ಹಲವರಿರುವುದರಿಂದ ಇಂಗ್ಲೀಷಿನವರು ಅದನ್ನು ತಮ್ಮ ದೇಶಕ್ಕೆ ಬಹುದೂರವಾಗಿ ಸಮುದ್ರದಾಚೆಗೆ ತಳ್ಳಿದಾರೆ.

—ಶ್ರೀ ಖಾರಾಂತ.

—0—

ನಾರಣಪ್ಪನ ನವರಾತ್ರಿ

ತಂದೆ ತಾಯಿಯ ಹರಕೆ ಮೊಳೆತು ಚಿಗುರಾಗುತ್ತೆ, ಕೂಸಾಗಿ ಬಂದ ರಾತ್ರಿ
ಕಂದನತಿ ಆಸೆಯಿಂ ಅಜ್ಜನಾ ದಾಡಿಗಾ ಗತ್ತು, ಬೇಸತ್ತ ರಾತ್ರಿ
ಬಂದ ಎಕ್ಸಾಮಿನಲಿ ಗೆದ್ದು ಡಿಗ್ರಿಯ ತರಲು ಓದೋದಿದಾ ರಾತ್ರಿ
ಗಂಧದಾ ಗೊಂಬೆಯೊಡನಾ ವರನು ಊರಲ್ಲಿ ಮೆರವಣಿಗೆ ಹೋದ ರಾತ್ರಿ
"ಸಂದೇಹ ಪಡಬೇಡಿ! ದೀಪಾವಳಿಗೆ ನೀವು ಬರಬೇಕು" ಎಂದ ರಾತ್ರಿ
ಅಂದೆ ಸಂಸಾರವನು ಹೂಡಿದಾ ಸತಿಪತಿಯರಿಚ್ಛೆರದಿ ಕಳೆದ ರಾತ್ರಿ
ನಂದಗೋಕುಲದಂತೆ ಕಂದಗಳ ಕಿರಲಾಟ ಜಾಗರಣೆ, ಪೂರ ರಾತ್ರಿ
ತಂದ ಸಂಬಳ ಸಾಲ್ದೆ ಮಾರ್ವಾಡಿ ಕಾಟದಲಿ ನರಳಿದಾ ಚಂಡರಾತ್ರಿ
ಮುಂದಿಯಾ ಕಿರುಕುಳಕೆ ಎದೆ ಸೋತು ಮನೆ ತೊರೆದು ಓಡಿದಾ ಭಂಡರಾತ್ರಿ

—ನಾ. ಕ.

———

ನವನಾರದ ಭಕ್ತಿ ಸೂತ್ರಾಣಿ

(ಟೀಕಾ ಸಹಿತ)

---

೧. ಅಥಾತೋ ಭಕ್ತಿ ಸೂತ್ರಾಣಿ.

ಈಗ ಭಕ್ತಿಯನ್ನು ಪಡೆಯಲನುಕೂಲವಾಗುವಂತಹ ಸೂತ್ರಗಳನ್ನು ವಿವರಿಸುತ್ತೇವೆ.

೨. ಭಕ್ತಿ ಶಾಸ್ತ್ರಾಣಿ ಮನನೀಯಾನಿ.

ಮುಖ್ಯವಾಗಿ ಭಕ್ತಿ ಶಾಸ್ತ್ರಗಳನ್ನು ಮನನ ಮಾಡತಕ್ಕದ್ದು.

೩. ಅಸ್ತ್ಯೇವ ಮೇವಂ.

ಅದು ಹೀಗೆ ಹೀಗೆ ಅಂತ ಇದೆ.

೪. ನಾ ವುಂಡಾಡಿ ಭಟ್ಟಾಃ

ನಾವೆಲ್ಲರೂ ಅಂದರೆ, ಮಾನವ ಕೀಟಗಳು ಉಂಡಾಡಿ ಭಟ್ಟರಲ್ಲವೆ ? (ಅಂದರೆ ನಾವು ಉಂಡು ಆಡುವ ಭಟ್ಟರು, ಎಂಬರ್ಥ.)

೫. ನಗರ ಗ್ರಾಮೇಷು ಚ.

ನಗರಗಳಲ್ಲೂ ಅಷ್ಟೆ ! ಗ್ರಾಮಗಳಲ್ಲೂ ಅಷ್ಟೆ !

೬. ಸಾತ್ವ ಸ್ಮೃತಿ ತಂತ್ರ ರೂಪಾ

ಭಕ್ತಿ ಶಾಸ್ತ್ರವೆಲ್ಲವೂ ಕೇವಲ ತಂತ್ರಗಳಿಂದ ತುಂಬಿದೆ.

೭. ಯಜ್ಞಾತ್ವಾ ಮತ್ತೋ ಭವತಿ, ಪಿತ್ತೋ ಭವತಿ, ಸಾಪಾಟ್ರಾಮೋ ಭವತಿ.

ಆದರಿಂದಲೇ ಮತ್ತರಾಗುವುದು ; ಪಿತ್ತವೇರುವುದು ; ಆಹಾರಾದಿಗಳು ಅಪರಿಮಿತವಾಗಿ ಸಿಗುವುದು

೮. ಕಂದ ಮೂಲ್ಯ ಪತ್ರ ಪುಷ್ಪ ಫಲತೋಯಾತ್ ತೃಪ್ಯಂತೆ

ಕಂದ ಪದ್ಯಗಳನ್ನು ಬರೆದು, ಮೂಲ್ಯದಿಂದ, ಮಾನ ಪತ್ರಗಳಿಂದ, ಹಾರ ತುರಾಯಿಗಳಿಂದ, ನಿಂಬೆಹಣ್ಣಿಂದ, ಟೀ ಕಾಫಿ ಪಾನೀಯಗಳಿಂದ ಸಂಬಂಧಪಟ್ಟವರನ್ನ ತೃಪ್ತಿಪಡಿಸುವುದು.

೯. ಅನಿರ್ವಚನೀಯಂ ಸ್ತೋತ್ರ ರೂಪಂ.

ಸ್ತೋತ್ರಗಳು ವಿಧವಿಧವಾಗಿವೆ. ಅದನ್ನು ವಿವರಿಸಕೂಡದೆಂದು ಹೇಳುತ್ತಾರೆ.

೧೦. ಅನ್ಯಸ್ಮಾತ್ ಸೌಲಭ್ಯಂ ಸ್ತೋತ್ರಂ.

ಇತರ ಎಲ್ಲ ಉಪಾಯಗಳಿಗಿಂತ ಮೇಲ್ಪಟ್ಟವರನ್ನು ಸ್ತುತಿಸುವುದೇ ಸುಲಭ.

೧೧. ಸ ತರತಿ ಸ ತರತಿ ರೂಪಾಂ ಸ್ತಾರಯತಿ.

ಅದು ತರುತ್ತದೆ; ಅದು ತರುತ್ತದೆ; ರೂಪಾಯಿಗಳನ್ನು ತರುತ್ತದೆ.

೧೨. ಟಗರ ನಾಟಕ ಸೂತ್ರಧಾರೀ ಭವೇತ್.

ಯಾವಾಗಲೂ ಇತರರನ್ನು ಟಗರುಗಳಂತೆ ತಲೆ ಹೊಡೆದುಕೊಳ್ಳಲು ಬಿಟ್ಟು ಆ ನಾಟಕದ ಸೂತ್ರಧಾರಿಯಂತಿರು.

೧೩. ಚಾಡೀ ಚರಿತ್ರಂ ಶ್ರವಣೀಯಂ.

ಚಾಡಿ ಕೇಳುತ್ತಿರತಕ್ಕದ್ದು.

೧೪ ಕೇಡೀ ಚಾರಿತ್ರ್ಯಂ ಮನನೀಯಂ.

ಕೇಡಿಗಳ ನಡತೆಯನ್ನು ಮನನ ಮಾಡತಕ್ಕದ್ದು.

೧೫. ಮೂಲ ಜಲಾಸ್ತುಸ್ಯಂತಿ ಶಾಖೋಪ ಶಾಖಾಃ

ಬೇರು ನೀರುಂಡಾಗ ತಣಿಯುವೇ ಭೂರುಹದ ಶಾಖೋಪ ಶಾಖೆಗಳು; ಅರ್ಥಾತ್, ಸಣ್ಣ ನೌಕರರಿಗೆ ನೀರು ಬಿಟ್ಟರೆ, ಮೇಲಿನ ಕೊಂಬೆತನಕ ಹೋಗುತ್ತದೆ.

೧೬. ಯ ಇದಂ ನವನಾರದ ಪ್ರೋಕ್ತಂ ವಿಶ್ವಸಿತಿ ಶ್ರದ್ಧತ್ತೆ ಸ ಭತ್ಯವಾನ್ ಭವತಿ ಇತಿ.

ನವ-ನಾರದರು ಹೇಳಿದ ಈ ಸೂತ್ರಗಳನ್ನು ನಂಬಿ ಯಾರು ಶ್ರದ್ಧೆಯಿಂದ ಆಚರಿಸುತ್ತಾರೋ ಅವರಿಗೆ ಭತ್ಯ ಸಿಗುತ್ತದೆ.

—ಎಸ್. ಎನ್. ಶಾಸ್ತ್ರಿ.

ಆಷಾಢಭೂತಿ ಅಂದರೆ ಯಾರೋ?

ನಗುನಗುತ್ತಾ ನಿಮ್ಮ ಕ್ಲಾಸಿಗೆ ಬರುವ ಹುಡುಗ, ಸಾರ್!

* *

ಸರ್ವಾಧಿಕಾರಿ ಪ್ರಭುತ್ವದಲ್ಲಿ ಆತನ ಮಾತೆಲ್ಲ ಕಾನೂನು!

ಪ್ರಜಾಪ್ರಭುತ್ವದಲ್ಲಿ ಅವರ ಕಾನೂನೆಲ್ಲ ಬರೀ ಮಾತು!

"ಇರಲಿ ದೇವ್ರು—ತಂಪು"

"ತರಕಾರೀ, ಬೇಕೇನಮ್ಮ ತರಕಾರೀ"

ಅಂಗಡಿಗೆ ಹೋಗಿ ಒದ್ದಾಡುವ ಬದಲು ಮನೆ ಬಾಗಿಲಿಗೆ ಬಂದವನ ಹತ್ತಿರವೇ ವ್ಯಾಪಾರ ಮಾಡಿದರೆ ಕಷ್ಟ ತಪ್ಪುತ್ತೆ ಎಂದು, ಅವನನ್ನು ಕೂಗಿದೆ. ಮಂಕರಿ ಹೊತ್ತುಕೊಂಡು ಆತನೂ ಬಂದ.

"ಏನಿದೆಯುಯ್ಯಾ"

"ಬದನೇಕಾಯಿ, ಸೋರೇಕಾಯಿ, ಗೋರೀಕಾಯಿ"

"ಸೊಪ್ಪು ಏನೂ ಇಲ್ಲವೇ" ಎಂದೆ.

"ಊರಲ್ಲೆಲ್ಲಾ ಖಾಯಿಲೆ ಸ್ವಾಮಿ, ಸೊಪ್ಪು ಯಾರೂ ಕೇಳೋಕಿಲ್ಲ"

"ಸರಿ ಬದನೇಕಾಯಿ ಎಷ್ಟಪ್ಪಾ ಪಂಚೇರಿಗೆ"

"ನಾಲ್ಕಾಣೆ ಸ್ವಾಮಿ"

"ಬಲಿತಿದೆಯಲ್ಲಯ್ಯಾ ಬರೀ ಬೀಜವೇನೋ"

"ಹಾಗಾದರೆ, ಸೋರೇಕಾಯಿ ತೊಗೊಳ್ಳಿ, ಬುದ್ಧಿ, ಬಲು ಚೆನ್ನ"

"ಸೋರೆಯುಕಾಯಿ ಯಾರಿಗೆ ಬೇಕಯ್ಯ, ಬದನೇಕಾಯೇ ಕೊಡು."

ಬದನೇಕಾಯಿ ತೂಗುತ್ತಾ, ಸೋರೆಕಾಯಿ ತಂಪು ಎಂದ. ನನಗ್ಯಾಕೋ ಇದು ಇಂಪಾಗಿ ಕಂಡಿತು. ನನ್ನದು ಉಷ್ಣಪ್ರಕೃತಿ ಒಂದು ನಿಮಿಷ ಹಾಗೆಯೇ ಯೋಚಿಸಿದೆ. ಈ ಆಂದೋಳನವನ್ನು ಅವನೂ ಗಮನಿಸಿದ್ದಿರಬೇಕು.

"ಇರಲಿ ದೇವ್ರು ಎರಡು ಸೋರೆಕಾಯೂ ಹಾಕ್ತೇನೆ."

ನನ್ನ ಮುಖನೋಡಿ ದೇವ್ರು ಎಂಬ ಭ್ರಮಣೆ ಬರಬೇಕಾದರೆ ಏನೋ ಇರಬೇಕು ನನ್ನ ಮುಖದಲ್ಲಿ ನನ್ನ ಸಾತ್ವಿಕ ಪ್ರಕೃತಿ, ಆತ್ಮಜ್ಞಾನ, ವೇದಾಂತ ಹೂರ್ಗ ಎಲ್ಲವನ್ನೂ ಏಕೀಕರಿಸಿ, ಇರಲಿ ದೇವ್ರು ಎಂದು ತಂಪಾದ ಸೋರೆಯ ಕಾಯಿ ಜುಲುಮ್ಮೆ ಮಾಡಿ ಮಾರಬೇಕಾದರೆ, ಈಶ್ವರನ ಕೈವಾಡ ಇದರಲ್ಲಿ ಇರಲೇ ಬೇಕು ಎನ್ನಿಸಿತು

*

ಸರಿ, ಬಲಿತ ಬದನೇಕಾಯಿನ ಜತೆಗೆ ಜೀಡದ ಸೋರೇಕಾಯನ್ನೂ ಕೊಂಡು ಕೊಂಡೆ.

*　　　　*　　　　*

ಸರಕಾರದ ಅಕ್ಕಿ ಅಂಗಡಿ. ಬೆಳಗ್ಗೆ ಹತ್ತು ಗಂಟೆ. ಕಛೇರಿ ಅವಸರ. ನೂಕು ನುಗ್ಗಲು.

ಅಂಗಡಿಯ ನೌಕರನನ್ನು ಕುರಿತು.

"ಕೊಯಮುತ್ತೂರು ಸಣ್ಣ ಬಂದಿದೆಯೇನ್ರಿ"

"ಬಂದಿದೆ ಸ್ವಾಮಿ. ಆದರೆ ಅಷ್ಟು ಚೆನ್ನಾಗಿಲ್ಲ"

"ಚೆನ್ನಾಗಿಲ್ಲವೇ ಇದ್ದರೆ ಪರವಾಗಿಲ್ಲ. ಎರಡು ರೂಪಾಯಿಗೆ ಕೊಡಿರಿ."

"ದಿಬ್ಬಣಸಾಲೆ ಚೆನ್ನಾಗಿದೆ ಸ್ವಾಮಿ, ಒದಗುತ್ತೆ."

"ಒದಗುವುದಿರಲಿ, ಹೊಟ್ಟೆ ಒಳಗೂ ಒದೆಯುತ್ತಲ್ರೀ ಅದು"

"ಇರಲಿ ದೇವ್ರು, ತೊಗೊಂಡು ನೋಡಿ ಮೈಗೆ ತಂಪು"

ಅರೇ, ಈ ನೌಕರನೂ ಅದೇ ಮಾತು. ನಾನು ದೇವ್ರು. ಉಷ್ಣದ ಮೈಯಿನ ದೇವರು, ತಂಪಾಗಲೆಂದು ದಿಬ್ಬಣಸಾಲೆ. ಇಬ್ಬರು ಹೀಗೇ ಹೇಳಿದ್ದಾರೆ.

ಇರಲಿ ಎಂದು ಎರಡು ರೂಪಾಯಿನ ದಿಬ್ಬಣಸಾಲೆ ಅಕ್ಕಿಕೊಂಡು ತಂಪಾಗಿ ಮನೆಗೆ ಬಂದೆ.

*　　　　*　　　　*

ಸಂಜೆ ಏಳು ಗಂಟೆ. ರೈಲ್ವೆ ನಿಲ್ದಾಣದ ಪುಸ್ತಕದ ಅಂಗಡಿಗೆ. ತರಹ ತರಹ ಮಾಸಪತ್ರಿಕೆಗಳು, ಕಣ್ಣು ಸೆಳೆಯುವ ಹೆಣ್ಣುಗಳ ಚಿತ್ರಗಳು. ಏನಾದರೂ ಒಂದು ಕತೆಯ ಪತ್ರಿಕೆಯನ್ನು ತೆಗೆದುಕೊಂಡು ಹೋಗೋಣ ಎಂದು ಅಲ್ಲಿಗೆ ಹೋದೆ.

"ಸಣ್ಣ ಕತೆಗಳ ಪತ್ರಿಕೆಗಳು ಯಾವುದು ಇದೆಯಯ್ಯಾ"

"ಕಥಾಂಜಲಿ, ಕಥಾಕುಂಜ, ಕಥಾವಳಿ, ಕಥಾಸರಿತ್ಸಾಗರ."

ಒಂದೇ ಉಸರಿನಲ್ಲಿ ಅಮರ ಹೇಳಿದ ಹಾಗೆ ಹೇಳಿದ. ಕನ್ನಡದಲ್ಲಿ ಇಷ್ಟಾದರೂ ಇದೆಯಲ್ಲ ಎಂದು ಈ ತಿಂಗಳ ಪತ್ರಿಕೆ ಯಾವುದಾದರೂ ಕೊಡಯ್ಯಾ ಎಂದೆ.

ಇದು ನೋಡಿದ್ದೀರಾ ಎಂದು ಒಂದು ಚಲನಚಿತ್ರ ಮಾಸಪತ್ರಿಕೆಯನ್ನು ಕೊಟ್ಟ. ಒಂದೆರಡು ಪುಟ, ಒಂದೆರಡು ಚಿತ್ರ ನೋಡಿದೆ.

ನೋಡಿದೆನಯ್ಯಾ, ಕತೆ ಮಾಸಪತ್ರಿಕೆ ಕೊಡಯ್ಯಾ ಎಂದೆ.

ಇಲ್ಲಾ ಸ್ವಾಮಿ, ಒಳ್ಳೆಯ ಚಿತ್ರಗಳಿವೆ. ಕನ್ನಡ ಚಿತ್ರೋದ್ಯಮದ ಕತೆಯೆಲ್ಲಾ ಇದೆ. ವಿಮರ್ಶೆಗಳೂ ಇವೆ. ವರ್ಣ ವರ್ಣದ ಬೊಂಬೆಗಳೂ ಇವೆ.

ಕಾಲೇಜು ಹುಡುಗರಿಗೆ ಈ ರೀತಿ ಹೇಳಿದರೆ ಚೆನ್ನ. ನನಗೆ ಹೇಳಿದರೆ, ಏನು ಪ್ರಯೋಜನ.

ನೀವು ಬೇಕಾದ್ದು ತೊಗೊಳ್ಳಿ. ಆದರೆ, ಇದೂ ಇರಲಿ ದೇವ್ರು, ಓದಿದರೆ ತಂಪು.

ಇದೇನಿದು ಮಸಲತ್ತು ಮಾಡಿಕೊಂಡಿರುವ ಹಾಗಿದೆಯಲ್ಲ. ಹೋದಲ್ಲೆಲ್ಲಾ ಇದೇ ಮಾತು. ಇರಲಿ ದೇವ್ರು ತಂಪು. ಅದೇನು ಸೋಜಿಗವೋ ನೋಡಿ. ಈ ಬಾಣ ಬಿಟ್ಟರೆ ನಾನು ಸುಸ್ತು. ಮಾತಿಲ್ಲದೆ ಅವನು ಕೊಟ್ಟದ್ದು ಕೊಂಡು, ಹಿಂತಿರುಗಿದೆ.

*　　　*　　　*

ಕಬ್ಬನ್ ಬನ. ಸಂಧ್ಯಾರಾಗ. ಕಣ್ಣು ಚುಚ್ಚುವ ಜಾರ್ಜೆಟ್ಟುಗಳು. ಹಾಗೂ ಹೆಣ್ಣುಮಕ್ಕಳು. ಮಾರಲಿಕ್ಕೆಂದು ಬಂದ ಮೋಟಾರುಗಳು. ಮುಖ್ಯ ಕಳ್ಳಕಾಕರ ಸಂತೆಯೋ, ಚತುರ್ವಿದ್ಯಾಪಾರಂಗತರ ಕೂಟವೋ ಎಂಬಂತೆ.

ಆಹಾರ ನಿಲಯಕ್ಕೆ ಹೋದೆ. ಹೋದ ಎರಡು ಗಂಟೆಗಳಲ್ಲೇ ಸರಪರಾಜಿನ ಹುಡುಗನೊಬ್ಬನು ಬಂದನು.

"ಏನು ಸಾರ್"

"ಏನಿದೆಯಯ್ಯಾ"

"ಸಾಲಡ್ ದೋಸೆ, ಪೂರಿ ಷೇವಾರ್, ಮಸಾಲೆ ಇಡ್ಲಿ" ಅರೆ, ಇದೇನು ಸೋಜಿಗ. ಪೂರ್ವ ಪಶ್ಚಿಮ ಸಮ್ಮಿಳನ, ಹಿಂದೂ ಮುಸಲ್ಮಾನ ಏಕೀಕರಣ. ಶಾಖಾಹಾರಿ, ಶಾಖಾಹಾರಿಗಳ ಆಹಾರಿ, ಇದೂ ಒಂದು ಬಗೆಯ ಸೋಜಿಗವೇ. ಇರಲಿ ಎಂದು.

"ಪೂರಿ ಷೇವಾರ್ ಒಂದು ಪ್ಲೇಟು" ಎಂದೆ.

ಹುಡುಗನು ಮಂದಿರದೊಳಕ್ಕೆ ಹೋದ. ಇನ್ನೂ ಸ್ವಲ್ಪ ಹೊತ್ತಾದ ಮೇಲೆ ಬಂದ.

"ಸಾರ್, ಪೂರಿಸೇವ್ಗ್ ಮುಗಿದುಹೋಗಿದೆ. ಸಾಲಡ್ ದೋಸೆ ತರಲೇ?"

"ಹೋಗಲಿ ಬಿಡಯ್ಯಾ ಬರೀ ಕಾಫಿ ತೆಗೆದುಕೊಂಡು ಬಾ"

"ಹಾಗಲ್ಲಾ ಸಾರ್. ಸಾಲಡ್ ದೋಸೆ ಬಹಳ ಪರವಾಯಿಲ್ಲ ಒಂದು ಒಂದು ತೊಗೊಳ್ಳಿ ಬಿಸಿ ಬಿಸಿ ತರುತ್ತೇನೆ. ಒಂದಿರಲಿ ದೇವ್ರು ಬಹಳ ತಂಪು."

ತಿರುಗಿ ಅದೇ. ತಿರುಗಿ ಸುಸ್ತು. ಆಗಲಿ ಎಂದು ಸಂಜ್ಞೆ ಮಾಡಿದೆ. ಬಂದ ಮೇಲೆ ತಿಂದೆ. ಎಲ್ಲಾ ದೋಸೆಗಳ ಹಾಗೇ ಇತ್ತು. ಅದರೆ ಮಧ್ಯೆ ಮಧ್ಯೆ ಸೌತೇಕಾಯಿ ಸಿಕ್ಕಿದ ಹಾಗೂ ಇತ್ತು. ಆದರೂ ಏನೋ ಹೇಳಿದ್ದಾನಲ್ಲಾ. ಇರಲಿ ದೇವ್ರು ಮೈಗೆ ತಂಪು. ನೋಡಿಯೇ ಬಿಡೋಣ.

* * *

ಸಂಪಾದಕರಲ್ಲಿ ವಿಜ್ಞಾಪನೆಗಳು:

ಮೇಲ್ಕಂಡ ನನ್ನ ಪ್ರಥಮ ಪ್ರಯತ್ನವನ್ನು ನಿಮಗಾಗಿ ಕಳಿಸಿದ್ದೇನೆ. ಅಷ್ಟಾಗಿ ರುಚಿಸದೇ ಇರಬಹುದು. ಆದರೂ ಇರಲಿ ದೇವ್ರು, ಓದಿದವರಿಗೆ ತಂಪು ಆಗಬಹುದು.

ನಿಮ್ಮ ವಿಶ್ವಾಸಿ,

ಶಿವಯ್ಯ.

—o—

ಹಾಲಿನ ಖರ್ಚನ್ನು ಕಡಿಮೆ ಮಾಡುವುದಕ್ಕಾಗಿ ಬೊಂಬಾಯಿಯಲ್ಲಿ ಐಸ್-ಕ್ರೀಂನ ತಯಾರಿಕೆಯನ್ನು ನಿರೋಧಿಸಿರುವರಂತೆ. ಬೆಂಗಳೂರಲ್ಲಿ ಈ ರೀತಿಯ ನಿರೋಧದಿಂದ ಹಾಲಿನ ಖರ್ಚು ಕಡಿಮೆಯಾಗುವ ಹಾಗಿಲ್ಲ.

* *

ಸಭಾಕಂಪ ಪೀಡಿತರಾದ ಸಂಗೀತಗಾರರ ಸಂಘವೊಂದನ್ನು ನ್ಯೂಯಾರ್ಕಿನಲ್ಲಿ ಸ್ಥಾಪಿಸಿರುವರಂತೆ. ಸಂಗೀತಕಂಪ ಪೀಡಿತರಾದ ಸಭಿಕರ ಸಂಘವೊಂದನ್ನು ಇಲ್ಲಿ ಸ್ಥಾಪಿಸೋಣ.

* *

ರೈಲಿನ ಗೆಳೆಯರು

ಕನ್ನನ್ ಹಾಡಿದಳು ಜವಾಬ್‌ನಲ್ಲಿ "ದುನಿಯಾ, ಏದುನಿಯಾ ತುಫಾನವೆು" ಎಂತ. ಅವಳ ಹಾಡಿನಲ್ಲಿ ವೇದಾಂತ ಇತ್ತು. ಆನಂದ ಇತ್ತು. ನಿಜ! ಆದರೆ ನಾವು ಈ ರೈಲಿನಲ್ಲಿರೋ ದುನಿಯಾನ ಕಟ್ಟಿಕೊಂಡು, ನಿಜವಾಗಿ ಪಾಡುಪಡ ಬೇಕಾದ ಸಮಯ ಬಂದರೆ, ನಮ್ಮ ಕಣ್ಣಲ್ಲಿ ಆನಂದಾಶ್ರು ಹರಿಯುತ್ತೋ, ಇಲ್ಲಾ ಇನ್ನೆಂಥಾದಾದ್ರು ಅಶ್ರು ಹರಿಯುತ್ತೋ, ಅಂತ ಗೊತ್ತಾಗುತ್ತೆ!

ಈ ಅನುಭವಗಳು ಯಾರಿಗೇನೂ ಹೊಸದಲ್ಲ. ಇಲ್ಲಿ ಹೇಳುವ ನನ್ನ ವೊದಲನೆಯ ಅನುಭವ ಈಗ ಎರಡು ವರುಷದ ಹಿಂದಿನದು. ಬೆಂಗಳೂರಿನಿಂದ ನಮ್ಮೂರಿಗೆ ಕ್ರಿಸ್ಮಸ್ ರಜಕ್ಕೆ ಹೋಗುತ್ತಿದ್ದೆ. ನಾನು ಕುಳಿತಿದ್ದ ಗಾಡಿ, ಗುಜರಾತಿ ಗುಂಪೊಂದರ ಪಾಲಾಗಿತ್ತು. ಅವರಿದ್ದವರು ನಾಲ್ಕು ಜನ ಗಂಡಸರು, ನಾಲ್ಕೈದು ಜನ ಹೆಂಗಸರು; ಏಳೆಂಟು ಬುಟ್ಟಿಯ ತುಂಬ ತಿಂಡಿ. ರೈಲು ಹೊರಟು, ಅವರೆಲ್ಲಾ ತಮ್ಮ ತಮ್ಮ ಸೀಟುಗಳಲ್ಲಿ ಸರಿಯಾಗಿ ಕುಳಿತುಕೊಂಡಿದ್ದೇ ತಡ, ಒಂದೊಂದಾಗಿ ಬುಟ್ಟಿಯನ್ನು ಬಿಚ್ಚಿದರು; ಬೆಂಗಳೂರಿನಿಂದ ತುಮಕೂರಿಗೆ ಬರುವುದರಲ್ಲೇ ನಾಲ್ಕು ಬುಟ್ಟಿ ಖಾಲಿಯಾಗಿತ್ತು, ನಾನು ಕಲ್ಪಿಸಿಕೊಂಡು ಹೇಳುತ್ತಿಲ್ಲ. ನಡೆದ ಸಂಗತಿ. ಅವರು ತಿನ್ನುವುದನ್ನು ನಾನೇಕೆ ನೋಡಬೇಕೆಂದುಕೊಂಡು, ಕಿಟಕಿಯಿಂದ ಹೊರಗೆ ತಲೆ ಹಾಕಿಕೊಂಡಿರುವುದಕ್ಕೇ ಪ್ರಯತ್ನ ಮಾಡುತ್ತಿದ್ದೆ. ಒಮ್ಮೊಮ್ಮೆ ಏನೋ ಪೂರ್ಣ ಚಂದ್ರನಂತೆ ಗುಂಡಾಗಿರುವ ಪದಾರ್ಥ ಈ ಚಂಚಲ ಕಣ್ಣುಗಳಿಗೆ ಕಾಣುತ್ತಿತ್ತು. "ನಿರಾಸಿ ಕಸಿಪಿಸಿ ಆಸಿಯಾ ಹಸಿವಿಸಿ" ಆರಿಸಬಿಡಬೇಕು, ಇಂಥಾ ಸಮಯದಲ್ಲಿ ಅದರಲ್ಲೂ ಹೊರಗಿನವನಿದ್ದವನು ನಾನೊಬ್ಬನೇ. ನನಗೆ ಒಂದು ಚೂರು......ಛೆ ಛೆ! ನಾನೂ ನಾಚಿಕೆಯಿಲ್ಲದೆ ಇದನ್ನೆಲ್ಲಾ ಹೇಳೋದೆ! ಇವರು ನಮ್ಮ ಗುರ್ಜರ ಗೆಳೆಯರು!

ಇನ್ನೊಂದು ಸಲ ಯಾರೋ ಸಂಸಾರ ವಂದಿಗರು—ತಿಪಟೂರಿನಿಂದ ಅರಸೀಕೆರೆಗೆ ಹೋಗುವವರಂತೆ ಒಂದು ಗಾಡಿ ಹಿಡಿಸುವಷ್ಟು ಸಾಮಾನು ತಂದು ಗಾಡಿಯಲ್ಲಿ ತುಂಬಿಬಿಟ್ಟರು. ಜಾಗ ಸಾಲಲಿಲ್ಲ. ನನ್ನ ಕಡೆ ನೋಡಿ, "ಕೊಂಚ ಏಳಿ" ಅಂದರು. ಎದ್ದೆ. ನನ್ನ ಜಾಗವನ್ನೊಂದು ಹಾಸಿಗೆ ಆಕ್ರಮಿಸಿಕೊಂಡಿತು; ಹಾಸಿಗೆಯನ್ನ ಮನೆಯವರು ಆಕ್ರಮಿಸಿಕೊಂಡರು. ರೈಲು ಹೊರಟಿತು. ಯಜಮಾನರು "ಉಸ್ಸಪ್ಪ" ಎಂತ, ತಾವೂ ಒಂದು ಹಾಸಿಗೆಯ ಮೇಲೆ ಕುಳಿತು, ತಮ್ಮ ತೊಡೆಯ ಮೇಲೆ ತಮ್ಮ ಮಗುವನ್ನು ಕೂರಿಸಿಕೊಂಡರು. ನಾನೂ ಗಗ್ಗಬಿಗ್ಗಿಯಾಗಿ ಅವರ ಮುಖ ನೋಡುತ್ತಿದ್ದೆ. "ಇನ್ನೊಂದು ಐದು ನಿಮಿಷ, ಅರಸೀಕೆರೆ ಬಂದುಬಿಡುತ್ತೆ, ನಿಮ್ಮ

ಜಾಗ ನೀವು ತೊಗೊಳ್ಳೋರಂತೆ."
"ತೊಗೊಳ್ಳೋಕ್ಕೆ ಅದು ನಮ್ಮದೆ, ನಿಮ್ಮದೆ ಹೇಳಿ ರೈಲ್‌ನೋರದ್ದು!" ಎಂದು ಐದು ನಿಮಿಷದಲ್ಲಿ ಅರಸೀಕೆರೆ ಬಂದೀತೆ ಎಂತ ಯೋಚಿಸುತ್ತಾ ನಿಂತು ಕೊಂಡೆ. ಇದೂ ಒಂದು 'ಆಕ್ರಮಣ' ಎಂದರೆ ಯಾರು ಒಪ್ಪಲಾರರು!

ಇನ್ನು ನಮ್ಮ ಕಾಲೇಜು ಗೆಳೆಯರ ಜೊತೆಯ ತೀರಾ ಇತ್ತೀಚಿನ ಅನುಭವ. ಇದೇನು! ಕಾಲೇಜು ಹುಡುಗರು ಬರದೇ ಹೋದ ಜಾಗವೇ ಇಲ್ಲವೇ? ಅವರಿಲ್ಲದ ಬರಹವೇ ಇಲ್ಲವೇ? ಎಂದು ಕೇಳ್ತೀರೇನೋ? ನಿಜ, ಅವರು ಸರ್ವಾಂತರ್ಯಾಮಿಗಳು "ಹಾಸ್ಗೆ ಬೀಸ್ಸಿ, ಸಿಗರೇಟ್ ಹಚ್ಚಿ, ಮಲಗ್ಬಿಟ್ಟ್ಯಾಂತ್ರ!" ಎಂದು ಹಾಸಿಗೆ ಹಾಸೋದೇ! ಮಲಗಿ, ಓದುತ್ತಿರುವುದು ಪುಸ್ತಕ, ಬಾಯಲ್ಲಿ ಸಿಗರೇಟ್, ಮೂಗಲ್ಲಿ "ಏ ಚಾಂದ್ ಚುಪ್ನಾ ಜಾನಾ!" ನಾನು ಗಾಡಿಗೆ ಹೋದರೆ ಯಾವುದೋ 'ಪೆಚ್ಚು' ಅಂತ ತಿಳಿಕೊಂಡರೋ ಏನೋ! ನನ್ನ ಕೈಲಿದ್ದ ಪತ್ರಿಕೆ, ಮಾಸಪತ್ರಿಕೆ ಇವುಗಳ ಸಂಖ್ಯೆಯನ್ನು ನೋಡಿ, ನನ್ನನ್ನ ನ್ಯೂಸ್ ಪೇಪರ್ ಏಜೆಂಟರು ಅಂತ ತಿಳಿದುಕೊಂಡರು ಅಂತ ಕಾಣುತ್ತೆ "ಯಾವುದಾದ್ರೂ, ಲಕ್ಷಣವಾಗಿರೋ ಸಿನೀಮಾ ಹುಡುಗೀರ್ ಇರೋ ಮ್ಯಾಗಜೈನು ಇದ್ಯೇನ್ರಿ?". "ನಾನು ನ್ಯೂಸ್ ಪೇಪರ್ ಏಜೆಂಟ್ ಅಲ್ಲಾರಿ." ಕ್ಷಮಿಸಿ. ಅದ್ಯಾವುದು, ನಿಮ್ಮ ಕೈಲಿರೋದು." "ವಿಶ್ವಭಾರತಿ ಕ್ವಾರ್ಟರ್ಲಿ" ಕೊಟ್ಟೆ. ಅದನ್ನ ಹೀಗೆ ತೆಗೆದು ಹಾಗೆ ಮುಗಿಸಿದ, ಪುಣ್ಯಾತ್ಮ". ಪಾಪ ನಂದಾಲಾಲರ ಚಿತ್ರಗಳು ಅವನ ಕಣ್ಣಿಗೆ ಕೋಳಿ ಕ್ಯಾತ ಕಂಡ ಹಾಗೆ ಕಂಡವಂತೆ! ಸಿನೀಮಾ ಮುಖಾತ್ಮೆ! ಅಷ್ಟರಲ್ಲಿ ರೈಲಿನಲ್ಲಿ ಇಸ್ಪೀಟು ಪ್ಯಾಕು ಬಿಚ್ಚಿದರು. ಕಿಟಕಿಯಿಂದ ಹೊರಗೆ ತಲೆ ಹಾಕಿ ಕೂತುಕೊಂಡೆ. ಆರ್ಟೀಗೂ ಡೈಮಂಡ್‌ಗೂ ವ್ಯತ್ಯಾಸ ತಿಳೀದೇ ಹೋದವ ನಾನು. ಈಗಲೂ ಗೊತ್ತಿಲ್ಲ!

ಇನ್ನು ನಮ್ಮ ಥರ್ಡ್ ಕ್ಲಾಸ್ ಅಪ್ಪರ್ ಬರ್ತ್ ಹಿಡಿದು ಮಲಗುವ ಜನ ಅದು ಅವರಿಗೆ ಮೀಸಲು. ಪೇಪರಿನ ಮೊದಲೆರಡು ಪಂಗ್ತಿ ಓದಿ ಮುಗಿಸುವುದರೊಳಗೇ ಎಷ್ಟು ಚೆನ್ನಾಗಿ ಮಲಗಿಬಿಡುತ್ತಾರೆ! ನಿದ್ದೆ ಬರುವುದಕ್ಕೆ ಏನಾದರೂ ಔಷಧಿ ಕುಡಿದು ಬಂದಿರುತ್ತಾರೋ ಏನೋ? ರೈಲ್‌ಗಾಡಿಯ ಜೀವಕೋಟಿಗಳು ಯಾವುವೂ (ತಿಗಣೆಯೂ ಕೂಡ) ಅವರಿಗೆ ಏನೂ ತೊಂದರೆ ಕೊಡುವಂತೆ ಕಾಣುವುದಿಲ್ಲ. ಆದರೆ, ಈ ಆಶ್ಚರ್ಯ ನೋಡಿ. ತಾವು ಇಳಿಯಬೇಕಾದ ಸ್ಟೇಷನ್ನು ಇನ್ನೈದು ಮೈಲಿ ಇದೇ ಎನ್ನ ಬೇಕಾದರೆ, ಥಟ್ಟನೆ ಎದ್ದು, ಹಾಸಿಗೆ ಸುತ್ತಿ ಕ್ರಾಪು ಇದ್ದವರು ಕ್ರಾಪು ಬಾಚಿ ಜುಟ್ಟಿದ್ದವರು ಜುಟ್ಟೊದರಿ, ಹಳೇ ಕೂದಲುಗಳನ್ನು ಗಡೀಪಾರು ಮಾಡಿ, ಕೋಟು ಧರಿಸಿ, ಸ್ಟೇಷನ್ನಿನಲ್ಲಿ ಇಳಿಯುವುದಕ್ಕೆ ಸಿದ್ಧರಾಗುತ್ತಾರೆ! ಎಲ್ಲಾ ಐದು ನಿಮಿಷದಲ್ಲಿ!

ಇನ್ನು ನಮ್ಮ ವೇದಾಂತಿಗಳ ಬಾಯಿ. ಅವರು ಕುಳಿತಿದ್ದೇ ತಡ, ಕಂಪಾರ್ಟಮೆಂಟಿನಲ್ಲಿದ್ದ ಕತ್ತಲು ಓಡಿ ಬೆಳಕು ತುಂಬುತ್ತೆ. ಅವರ ಬಣ್ಣದಿಂದಲ್ಲ, ಮಾತಿನ ರಭಸದಿಂದ. "ನಾನು A.S.M. ಆಗಿದ್ದೆ ಸಾರ್," ಪಕ್ಕದವರನ್ನು ಕುರಿತು, "ನಮ್ಮ ಅಳಿಯ ಆ

ಮೇಲೆ ಅಲ್ಲಿಗೇ ಬಂದ ಇದೇ ಸ್ಟೇಷನ್ನಿನಲ್ಲಿ, ಅವನು ಹೋಗ್ಬಿಟ್ಟ ಸಾರ್. ಇದ್ದೊಬ್ಬಳು ಮಗಳ ಗಂಡ ಸಾರ್." ಪಕ್ಕದವರಿಂದ "ಅಯ್ಯೋ, ಪ್ಪ,ಪ್ಪ...." ಮಹಾರಾಜರ ಪರ್ಸನಲ್ ಸೆಕ್ರೆಟರಿಯಿಂದ ದಿವಾನ್ ವರೆಗೂ ಎಲ್ಲರೂ ಗೊತ್ತು. ಅದಕ್ಕೇ ನಮ್ಮಳಿಯನಿಗೆ ಎತ್ತಿಕೊಳ್ಳುತ್ತಾ A.S.M. ಕೊಡಿಸಿದ್ದೆ ಸಾರ್. But that is all past story. Act act in the living present ನಮ್ಮ Motto ಆಗ್ಬೇಕು ಸಾರ್. ನನ್ನ ದುಃಖ ತಡೆದುಕೊಳ್ಳೋಕೆ ವೇದಾಂತ ನನಗೆ ಸಹಾಯ ಮಾಡ್ತು. ಈ ಪುಸ್ತಕ ನೋಡಿ, The great ego ಬೇಕಾದರೆ ಇಲ್ಲಿ ಓದಿ ನಾನು ಇಳಿಯೋದರ ಒಳಗೆ" ಎಂದು ಹೇಳಿ ತಮ್ಮ ಸ್ನೇಹಿತರಿಗೆ (ಬಹುಶಃ ರೈಲ್ವೇ ಸ್ನೇಹಿತರು) ಆ ಪುಸ್ತಕ ಕೊಟ್ಟರು. ಆದರೆ ಅದನ್ನ ಓದುವುದಕ್ಕೆ ಅವಕಾಶ ಮಾತ್ರ ಕೊಡಲಿಲ್ಲ ಸ್ಟೇಷನ್ ಬಂತು. ಸದ್ಯಕ್ಕೆ ಅವರಿಳಿದು ಹೋದರು. ಕೂಡಲೇ ಕಂಪಾರ್ಟಮೆಂಟಿನಲ್ಲಿ ಕತ್ತಲೆ ಮುತ್ತಿತ್ತು; ಹೊರಗೆ ಕತ್ತಲಾದುದರಿಂದ ಕಂಪಾರ್ಟ್‌ಮೆಂಟಿನಲ್ಲಿ ಬರೋ ತಾಯಂದಿರು; "ಹೊಸ ತಾಯಂದಿರೋ ಹಳೇ ತಾಯಂದಿರೋ?" ಎಂದು ಕೇಳಬೇಡಿ. ನಾನು ಹೇಳುವ ಮಾತುಗಳಿಗೆ ಅಂತಹ ಗಡಿಯಿಲ್ಲ. ಎಲ್ಲರಿಗೂ ಅನ್ವಯಿಸುತ್ತೆ. ನಮ್ಮ ದೇಶ ವಿಚಿತ್ರ ದೇಶ. ಮಕ್ಕಳು ಆದ ಆದ ಹಾಗೆಲ್ಲಾ ತಾಯಿಯರ ಪ್ರೀತಿಯೂ ಹೆಚ್ಚುತ್ತೆ. ಮಕ್ಕಳನ್ನು ಮನೆಯಲ್ಲಿ ಮುದ್ದಿಸುವುದರಲ್ಲೇ ಅವರೆಂದೂ ತೃಪ್ತರಾಗುವುದಿಲ್ಲ. ರೈಲಿನಲ್ಲಿ ಅವನ್ನು ಕಂಕುಳಿಂದ ಎತ್ತಿ, ಆದರ ಮುಖದೆದುರು ತಮ್ಮ ಮುಖ ಮಾಡಿ, "ನಗ್ತೀಯೋ? ಹೌದೋ.... ಛಿ ಕಳ್ಳ, ಛಿ ಕುಳ್ಳಿ....ಎಂದು ಅವು ನಗುವುದಕ್ಕೆ ಮುಂಚೆಯೇ ತಾವೇ ಹಲ್ಲು ಕಿರಿದು "ನನ್ನ ಚಿನ್ನ, ರನ್ನ, ಕಾಳ, ಕರಿಯ ..." ಎಂದು ನೋಡುವ ನಾಲ್ಕು ಜನರೆದುರು ಮುದ್ದಿಸಿದರೇ ಅವರಿಗೆ ಸಂತೋಷ, ತೃಪ್ತಿ. ಮೊನ್ನೆ ಇಂತಹ ಪ್ರಸಂಗವೊಂದರಲ್ಲಿ ನನಗೆ ನಗುವನ್ನು ತಡೆಯಲಾಗಲಿಲ್ಲ; ನಕ್ಕೆ. ಆದರೆ, ಕೂಡಲೇ ಬಾಣ ಬಂತು, "ಇವರಿಗೇನು ಮಕ್ಕಳು ಮರಿ ಇಲ್ವೇನೋ, ಮಕ್ಕಳನ್ನ ಆಡಿಸಿದರೆ ಕಿಸಿ ಕಿಸಿ ನಗು, ಅಂಥಾದೇನು?" ಅವರು ಪಶ್ಚಿಮದಲ್ಲಿ ತಿರುಗಿಕೊಂಡು ಈ ಮಾತನಾಡಿದರೂ ಪೂರ್ವದಲ್ಲಿದ್ದ ನನಗೆ ಕೇಳಿಸಿತು. ನಾನು ದಕ್ಷಿಣಕ್ಕೆ ತಿರುಗಿ "ಸದ್ಯಕ್ಕೆ ಈ ಮಕ್ಕಳ ಕಾಟ ನನಗಿಲ್ಲ" ಎಂದುಕೊಂಡು ಉತ್ತರದಿಂದ ಬರಬೇಕಾದ ಉತ್ತರಕ್ಕೆ ನಿರೀಕ್ಷಿಸದೆ, ಗಾಡಿಯಿಂದ ಇಳಿದೆ, ನಮ್ಮೂರು ಬಂದಿತ್ತು.

ಮುಂದಿನ ಸಾರ್ತಿ ನಾನು ರೈಲುಗಾಡಿಯನ್ನು ಹತ್ತಿದ್ದು. ಹದಿನೈದು-ಹದಿನಾರು ದಿನಗಳಾದ ಮೇಲೆ, ನಮ್ಮ ಚಿಕ್ಕಪ್ಪನ ಮನೆಗೆ ಬೆಳಗಾಂಗೆ ಹೋಗುತ್ತಿದ್ದೆ. ಕಂಪಾರ್ಟ್‌ಮೆಂಟಿನಲ್ಲಿ ಒಂದು ಮಗುವಿನ ಕಾಟ ತಲೆದೋರಿತು. ಆ ಮಗು ತನ್ನ ತಾಯಿಯ ತೊಡೆಯನ್ನ ಬಿಟ್ಟು ನನ್ನ ಹತ್ತಿರ ಬಂದು 'ಅಣ್ಣ ಅಣ್ಣ' ಎನ್ನುತ್ತಾ ಪಂಚೆಯ ಮೇಲೆ ಹತ್ತಿ, ರುಮಾಲನ್ನು ಕಿತ್ತು, ಕೈಲಿದ್ದ ಪೇಪರನ್ನು ಹರಿದು "ನಿನ್ನ ಕನ್ನಡಕ ಕೊಡೋ" ಎಂತ ಹೊಡೆದುಕೊಳ್ಳುವುದಕ್ಕೆ ಶುರುಮಾಡಿತು. ಆ ಮಗುವಿನ

ನಿಜವಾದ 'ಅಣ್ಣ' (ತಂದೆ) ಗಾಡಿಯಲ್ಲಿ ರಲಿಲ್ಲ. ತಾಯಿ "ಅವರಣ್ಣ ಅಲ್ಲ ಬಾ ಮಗು" ಎಂದು ಬರಿ ಬಾಯಲ್ಲಿ ಹೇಳು ತ್ತಿದ್ದರೇ ವಿನಃ ಮಗುವನ್ನು ಕರೆದು ಕೊಳ್ಳುವ ಸಾಹಸ ಮಾತ್ರ ಮಾಡಲಿಲ್ಲ. ಲಜ್ಜೆಯಂತೆ ಲಜ್ಜೆ! ಅದೆಂತಹ ಲಜ್ಜೆ? ಇನ್ನೊಬ್ಬರು ಕಷ್ಟ ಅನುಭವಿಸುತ್ತಿರುವು ದನ್ನು ನೋಡುತ್ತಿರುವ ಲಜ್ಜೆ. ಕೊನೆಗೆ ನಮ್ಮ ಚಿಕ್ಕಪ್ಪನ ಮಗುವಿಗೆಂದು ತೆಗೆದು ಕೊಂಡು ಹೋಗುತ್ತಿದ್ದ ಜಪಾನಿ ಪಂಚ ರಂಗಿ ಕನ್ನಡಕವನ್ನ (ನೀವೆಲ್ಲಾ ಅದನ್ನ ನೋಡಿದ್ದೀರಿ) ತುಗುಚಿದೆ! ಪೆಟ್ಟಿಗೆ ತೆಗೆದಾಗ ಆ 'ಮುಖವಾಡ' ವನ್ನು ಕಂಡು ಅದನ್ನೂ ಕೊಡು ಎಂತು. ತೊಗೋ ಎಂದು ಅದನ್ನೂ ಕೊಟ್ಟೆ. ಮುಖವಾಡವನ್ನು ಕಟ್ಟಿಕೊಂಡು ನನ್ನ ನ್ನೇ ಹೆದರಿಸುವುದಕ್ಕೆ ಬಂತು! "ನಿನ ಗಾಗಲೇ ಹೆದರಾಯಿತು ಮಹಾರಾಯಾ" ಎಂದುಕೊಂಡೆ. ಆ ಮೇಲೆ ಆ ತಾಯಿ (ಮಹಾತಾಯಿ) ನನ್ನ ಹತ್ತಿರದಿಂದ ಮಗುವನ್ನು ಎತ್ತಿಕೊಂಡು ಹೋಗುವ ಸಾಹಸ ಮಾಡಿದರು!

ಈ ಹತ್ತು ನಿಮಿಷದ ಅನುಭವದಿಂದ ಬೇಸರವಾಗಿ, ಸ್ವಲ್ಪ ಮಲಗಿಕೊಳ್ಳೋಣ ಎಂದು, ಬಿಸುಲು ಜಾಸ್ತಿ ಇದ್ದುದರಿಂದ ಕಿಟಕಿಯನ್ನು ಹಾಕಲು ಹೋದೆ. ಆ ಮಗು "ಕಿಟಕಿ ಬಾಗಿಲು ಹಾಕ್ಬಿಟ್ಟು ಅಣ್ಣ" ಎಂತಾ ತೆಗೆಯೋದೆ! ನಾನು ಬಿಡಬೇಕಲ್ಲಾ! ಬಾಗಿಲು ಹಾಕಿ, ಹಾಸಿಗೆ ಹಾಸುವುದಕ್ಕೆ ಶುರು ಮಾಡಿದೆ. ಎರಡು ಸುತ್ತು ಬಿಚ್ಚಿದೆ. ಮತ್ತೆ ಶುರು, "ಅಣ್ಣಾ ನಾನು ತಾಚಿ" ಕೂಡಲೇ ಹಾಸಿಗೆಯನ್ನ ಮೊದಲಿನ ಹಾಗೆಯೇ ಸುತ್ತಿ ಮುಂದಿನ ಸ್ಟೇಷನ್ನಿ ನಲ್ಲಿ ಗಾಡಿ ಬದಲಾಯಿಸಿಬಿಟ್ಟೆ.

ಹೇಳುವುದಕ್ಕೆ ಹೊರಟರೆ, ಪುರಾಣ ಬರೆಯಬಹುದು. ಎಷ್ಟಾದರೂ ರೈಲೂ ಒಂದು 'ದುನಿಯಾ' (ಪ್ರಪಂಚ).

ಉಳಿದಿದ್ದು ಇನ್ನೊಂದು ಸಾರಿ, ಬಿಡು ವಿದ್ದರೆ.

—ಅ. ಸೋಗಾಲ.

---o---

"ಸಿನಿಮಾ ಮಂದಿರಗಳಲ್ಲಿ ಜನರು ಮನಸ್ಸಿ ಹರಟಬಾರದು. ತಮ್ಮ ತಮ್ಮ ತಾಪತ್ರಯಗಳನ್ನು ಒಬ್ಬರಿಗೊಬ್ಬರು ವಿವರಿಸಿ ಕೂಗಾಡಬಾರದು."

(ವೃತ್ತಪತ್ರಿಕೆ)

ದುಡ್ಡು ಕೊಟ್ಟದ್ದೂ ಅಲ್ಲದೆ, ಆ ಹಾಳು ಚಿತ್ರಗಳನ್ನು ನೋಡುತ್ತಾ ಕೆಮ್ಮದೆ ಕೂತಿರಬೇಕೇನು?

*　　　*

ಚಿಕ್ಕಪ್ಪ ಪಟ ನೇತುಹಾಕಿದ್ದು

ಓಹೋ ಹೋ ಹೋ ಹೋ! ಏನ್ರಯ್ಯಾ ಇವತ್ತು ನಿಮ್ಮನೇಲಿ ಇಷ್ಟು ಗಲಾಟೇ—ಓ, ಪಟ ನೇತುಹಾಕಿದ್ದೀರಾ........ಇದಕ್ಕೆಷ್ಟು ಜನ ಅಂತ? ಏನು ಗಲಾಟೆ........ಏನು ಕತೆ........ಏನೋ ಮಹಾಕಾರ್ಯ ನಡೆಸ್ತಿರೋರಹಾಗೇ........ ಜಾಗ ಬಿಡಿ........ಜಾಗಾ ಬಿಡಿ... ....ಎಲ್ಲಿ? ಎಲ್ರೋ, ಪಟ ಎಲ್ರೋ?........ಹು, ಕೊಡಿ ಇಲ್ಲಿ. ಇಲ್ಕೊಡೋ........ಅಯ್ಯೋ, ಏನ್ಹೇಳಲೀ........ಅಲ್ಲಾ ಒಂದ್ಪಟಾ ನೇತ್ಹಾಕ್ಕೋಕ್ಕೆ ಇಷ್ಟು ಜನಾನೇ? ಎಲ್ಲಿ ರಾಮು, ಲೋ ರಾಮೂ, ರಾಮೂ ನಿನ್ನನ್ನೇ ಕೂಗಿದ್ದು........ಬಾ ಇಲ್ಲಿ, ಹೋಗು ಸುತ್ಗೆ ತಗೊಂಡು ಬಾ, ಸಿಕ್ಲಿಲ್ವೆ? ....ಈ ಕಲ್ನಲ್ಲೇ? ಚೆನ್ನಾಗಿದೆ! ಹೋಗು, ಪಕ್ಕದ್ಮನೇ ಗಿಕ್ಕದ್ಮನೇಯಿಂದ ತಗೊಂಬಾ. ಹುಂ, ಓಡು ಬೇಗ........ಹಾಗೇ........ನೋಡು........ಇಂದಾ—ಒಂದು ನಾಲ್ಕು ಗೋಲ್ಡುಫ್ಲೇಕು ತಗೊಂಡು ಬಾ........ಓಡು........ಸಿಕ್ತೆ ಸುತ್ಗೆ? ಸರಿ ಬಿಡಿ........ತಾ ಇಲ್ಲಿ........ಇಲ್ಕ್ಯಾರೋ........ಥೂ........ ಏನು ಹುಡುಗರ್ರೋ ....ಇರ್ರೋ........ನೀವೆಲ್ಲ ಸುಮ್ನೆ ಇದ್ಬಿಡಿ........ನಾನೆಲ್ಲಾ ಮಾಡ್ತೇನೆ.

ಎಲ್ಲಿ ಮೊಳೆ........ಇದೆಂಥಾ ಮೊಳೇನೋ, ತಡಿಯುತ್ತೇನೋ ಪಟದ್ದಾರಾನಾ? ಎಲ್ಲಿ ಪಟ ಎಷ್ಟು ಭಾರ ನೋಡೋಣ........ಇಲ್ಕೊಡೇ ಇಲ್ಲಿ........ ನೋಡ್ತೀಯಂತೆ ಆ ಮೇಲೆ........ಓಹೋ ಹೊ ಭಾರವೆ........! ಆ ಮೊಳೆ ಕಿತ್ಗೊ ನೋಡೋಣ........ಅದು........ಅದು........ಪರವಾಗಿಲ್ಲ ಕೀಳು ಅದನ್ನ........ಬಂತೆ ....ಬರ್ಲಿಲ್ವೇ........ಅಲ್ಲಾಡ್ಸು, ಬಗ್ಸು........ಈ ಕಡೆ........ಆ ಕಡೆ........ಹೂಂ ಕಿತ್ತಿದ್ಯಾ........ತಾ ಇಲ್ಲಿ! ಕಿಟ್ಟೀ ಆ ಸ್ಟೂಲು ಎಳಕೊ ಇಲ್ಲಿ........ಈ ಕಡೆ........ ಇಲ್ಲಿ........ಮೆಲ್ಗೆ........ಮೆಲ್ಗೆ........ಇನ್ನು ಸ್ವಲ್ಪ....ಸ್ವ....ಲ್ಪ........ಸರಿ ಹಿಡುಕೊ ಭದ್ರವಾಗಿ........ಭದ್ರ........ಭದ್ರ........ಅಲ್ಲಾಡ್ಸಿಯೇ!........

ಮೊಳೆ ಇಲ್ಕೊಡೇ.... ಏನೋ ಕೈಗೆ ತಗೊಂಡ್ರು ದೊಡ್ಡದಾಗಿ ಕೆಲಸ ಮಾಡೋರ ಹಾಗೆ........ಮೊಳೇನ........ಇಲ್ತಾ........ಎಲ್ಲಿ ಸುತ್ಗೇ? ಸುತ್ಗೆ ಎಲ್ಲೋ? ಇಲ್ಕೊಡು........ಪಟಾನ ಹಾಗೇ ಹಿಡಕೊ ಶೀನ, ನಾ ಕೇಳ್ದಾಗ ಕೊಡು........ಆ........ಇಲ್ಲೇ ಹೊಡಿ ಅಂತೀರಾ, ಇಲ್ಬೇಡಿ ಅಂದ್ರೆ........ಮಧ್ಯಕ್ಕೆ ಇಲ್ಲಿ ಬಾಗಿಲ ಎದುರ್ಗೆ........ಆಯ್ಯೋ, ಬಿತ್ತು ಮೊಳೆ........ತೆಕ್ಕೊಡು.... .... ಎಲ್ಹೋಯ್ತು ಕಿಟ್ಟ, ಸರಿಯಾಗಿ ಹಿಡಿ ಸ್ಟೂಲ್ನ........ಏನ್ಹಾಳು ಸುತ್ಗೇನೋ, ಸರಿಯಾಗಿ ಏಟು ಬಿದ್ರೆ ತಾನೇ........ಕಲ್ಲೇ ವಾಸಿ........ಬೇಡ ಬೇಡ ಕಲ್ಯಾಕೆ, ಸುತ್ಗೇನೇ ಇರ್ಲಿ........ಏನೋ ಪರವಾಯಿಲ್ಲ ನಿಂತಿದೆ ಮೊಳೆ........ರಾಮೂ........ ರಾಮೂ ಲೋ, ಇಂದಾ ಹಿಡುಕೋ ಸುತ್ಗೆ........ಎಲ್ಲಿ ತಂದ್ಯಾ ಗೋಲ್ಡುಫ್ಲೇಕು? ಎಲ್ಲಿ ತಾ! ಸೀತಾ, ಆ ಕೋಟ್ನಲ್ಲಿ ಬೆಂಕಿಪಟ್ಣ ಇದೆ ತೆಕ್ಕೊಡು........ಮತ್ಗೆ

ಗಡಿಯಾರ ಇದೆ ಬೀಳ್ಸೀಯೆ! ಹಾಗೇ ನೋಡು, ಆ ಜೋಬ್ನಲ್ಲಿ ನಶ್ಯದ ಡಬ್ಬ ಇದೆ ತೆಗೆ........ಅದು........ಆ ಜೋಬ್ನಲ್ಲಿ........ಬಿಡೆ........ನೀ ತೆಗ್ಯೊ ರಂಗ...... ನೀನು ಬೆಳೆದಿದ್ದಿಯಲ್ಲ ಉದ್ದಕ್ಕೆ ತೆಂಗಿನ ಮರದ್ಹಾಗೆ........ತಾ ಇಲ್ಲಿ........ಹುಂ.... ಅಲ್ಲೇ ಇಟ್ಬಿಡೂ........ತಾಳು........ಇದನ್ನೂ ಇಟ್ಬಿಡು ....ಈ ಬೆಂಕಿಪಟ್ಣಾನೂ ಹು........ಇಂದಾ........

ಎಲ್ಲಿ ಶೀನ, ಪಟ ಕೊಡು........ದಾರ ಗೀರ ಕಟ್ಟಿದೀರೋ, ಸರಿಯಾಗಿ........ ಕೊಡು........ನೋಡು ನೋಡು ಕಿಟ್ಟ....... ಅಲ್ಲಾಡಿಸ್ತೀ ಸ್ಟೂಲ್ನ ....ಭದ್ರ ವಾಗಿ ಹಿಡಿ........ನೀನೂ ಹಿಡಿ ರಂಗ, ಸ್ಟೂಲ್ನ........ಈಕಡೆ ಬಾ........ನೀನಾಕಡೆ ಹೋಗೋ........ನೀನಲ್ಲ........ನೀನೀಕಡೇನೋ........ಉಹು ಹು ಹುಂ ಈ ಕಡೆ ....ಹೂಂ ಆ ಕಡೆ........ಸರಿ........ತಾ, ಶೀನ, ಪಟಾನ........ಹ್ಹಾ....ಗೇ ೯ ೯ ಆಹ್ಹಾ! ಜಾಣಾ!!........ಅರೆರೆ ಸ್ವಲ್ಪ ತಗೋ ಪಟ, ಹಿಡಿ, ಹಿಡಿ, ಬೇಗ........ ಬಾಯಲ್ಲಿ ಸಿಗರೇಟು ಚಿಕ್ಕದಾಗೋಯ್ತು........ಮೀಸೆ ತನ್ಕ ಬಂದ್ಬಿಡ್ತು........ಹಿಡಿ ....ಹೂಂ........ರಾಮೂ ಈ ಸಿಗರೇಟು ತುಂಡ್ನ ಬಿಸಾಕಿಬಿಡಪ್ಪ ಆಚೇಗೆ........ ತಾರೋ ಪಟ ಈಗ........ಆಹ್ಹಾ........! ಸರಿ........ತಾಳಿ ತಾಳಿ........ಎಲ್ಲಪ್ಪ ದಾರ ಇದರ್ದು ಅನಿಷ್ಟ........ತಾಳ್ರೀ ಯಾಕೆ ಅಷ್ಟು ಕವ ಕವ ಕವ ಅಂತ ಗಲಾಟೆ ಮಾಡ್ತೀರಿ........ಏನೋ ಮಹಾ ಕೆಲ್ಸ ಮಾಡೋರ ಹಾಗೇ.... ...ಹೂ ದಾರ ಇದೆ, ಸಿಕ್ತು........

ಆಂ? ಸರಿಯಾಯ್ತೆ? ತಾಳಿ, ಇಳಿದು ನೋಡೋಣ.......ಎಲ್ಲೋ ಸ್ಟೂಲು, ಎಳಕೋ ಆ ಕಡೆ........ಹಾ ಹಾಗೇ........ತಾಳಿ........ಆಕಡೆ ಈಕಡೆ ಲೆವೆಲ್ ಸಮವಾಗಿದ್ಯೆ ನೋಡೋಣ........ಈ ಕಡೆ ಸ್ವಲ್ಪ ಯಾಕೋ........ಆ? ಅಲ್ವೆ? ಹೌದು! ತಳ್ಳೋ ಸ್ಟೂಲ್ನ ಕಿಟ್ಟ, ಇರೊ, ಸ್ಟೂಲ್ಯಾಕೊ........ಅಜ್ಜಿ ಆ ಮಡಿ ಕೋಲ್ನ ತನ್ನಿ ಸ್ವಲ್ಪ, ಅದೇ ಸರಿ........ಅಥ್ವಾ ಸ್ಟೂಲೇ ವಾಸೀನೇ, ಹತ್ತಿ ಸರಿ ಮಾಡಿದ್ರೆ........ಹಾಕೊ ಸ್ಟೂಲ್ನ........ಆ, ತಂದೇಬಿಟ್ರಾ ಕೋಲ್ನ, ಕೊಡಿ ಇಲ್ಲಿ ....ಕೋಲ್ನೇ ಕೊಡಿ........ಅಯ್ಯೋ ಆಗಲ್ಲ ಇದ್ರಿಂದ........ತಗೊಳಿ........ಎಲ್ಲಿ ಸ್ಟೂಲು........ಸ್ಟೂಲೆಲ್ರೋ?........ಅಷ್ಟರಲ್ಲೇ ಇವ್ರಿಗೆ ಏನೋ ಅವಸರ, ತಗೊಂಡೇ ಹೋಗಿದ್ದಾರೆ........ರಾಮು........ರಂಗು ....ಕಿಟ್ಟ........ಶೀನ........ಸೀತಾ ....ಲೇ........ಲೋ........ಅಯ್ಯೋ ನೀವೇ ತಂದ್ಬಿಟ್ರಾ........ಅತ್ತಿಗೇ? ಕೊಡಿ, ಇಲ್ಹಾಕಿ........ಸ್ವಲ್ಪ ಜರುಗಿಸಿ........ಈ ಕಡೆ........ಇನ್ನೂ........ಹೂಂ........ಸರಿ ....ಸರ್ರಿ........ಈಗ........

ಬನ್ರೋ........ಇಲ್ಬನ್ರೋ ನೋಡ್ರೋ........ಆಯ್ಯೊ........ಇಷ್ಟಕ್ಕೆ ಏನೇನೋ ಅವಾಂತರ........ಒಂದ್ನಿಮಿಷದ ಕೆಲ್ಸ........ಎಲ್ಲಿ ಬೆಂಕಿಪಟ್ಣ ಕೊಡಿ........

—ಎಸ್. ಎನ್. ಶಿ.


ಅವತಾರ ಪುರುಷನ ಅವಸ್ಥಾ—ಶತಕ

(ಗೋವಿನ ಕ್ಷಮೆ ಬೇಡಿ—ಕೊರವಂಜಿಗೆ ಸಮರ್ಪಣೆ)

ಜನನ :

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ಣಾಟ ದೇಶದಿ
ಇರುವವರ ಮಾದರಿಯ ಗ್ರಾಮದಿ
ಭರದಿ ಜನಿಸಿದ ಕಂದನು.

ಜನಿಸಿದಾಕ್ಷಣ ದೇವದುಂದುಭಿ
ಘನನಿನಾದವು ಮೊಳಗುತಿರಲು
ಜನ ಸಮೂಹವು ಬಂದು ನೋಡಿ
ಮನದಿ ತಳೆಯಿತು ಹರುಷವ



ಶೈಶವ :

ಮೊಳೆವ ಮಾವಿನ ಮೊಳಕೆಯಂದದಿ
ಎಳೆಯ ಗೋವಿನ ಕರುವಿನಂದದಿ
ಕಳೆದು ದಿನಗಳ ಹಸುಳೆ ಬೇಗನೆ
ಬೆಳೆದು ಹರುಷದಿ ನಲಿಯಿತು.

ಸಿಡಿದು ರೋಷದಿ ಹಸಿವು ತಡೆಯದೆ
ಘುಡುಘುಡಿಸಿ ಗೋಳಿಟ್ಟು ಕಿರಿಚುತ
ಬಡಿದು ಪರಚುತ ತಾಯಪ್ರಾಣವ
ಹಿಂಡಿ ಹಿಗ್ಗಿತು ಕಂದನು.

ಬಾಲ್ಯ :

ಪಶುಪತಿಯ ಪರಿಪೂರ್ಣ ದಯೆಯಿಂ
ಶೈಶವಾವಸ್ಥೆಯನು ಕಳೆಯಿತು
ಹಸಿವು, ತೃಷೆ, ಕಪಿಚೇಷ್ಟೆ, ಕುಹಕದಿ
ಹಸುಳೆ ಬಾಲ್ಯವ ತಳೆದನು.

ಉದಯ ಕಾಲದೊಳೆದ್ದು ಬಾಲನು
ಮುದದಿ ಬೆಣ್ಣೆಯ ಕದ್ದು ತಿನ್ನುತ
ಬುದ್ಧಿವಂತಿಕೆ ಸುಳಿವೆ ಇಲ್ಲದೆ
ಪೆದ್ದನಾದ ಕುಮಾರನು.

ಕೌಮಾರ :

ಹಲಗೆ ಬಳಪವ ಹಿಡಿಯಲಿಲ್ಲ
ಶಾಲೆ ಬಳಿಯಲಿ ಸುಳಿಯಲಿಲ್ಲ
ಪೋಲಿ ಅಲೆಯುತ ಕಾಲಕಳೆಯುತ
ಬಾಲಲೀಲೆಗಳಾಡಿದ

ಚಿಣ್ಣಿದಾಂಡಿನ ಬುಗುರಿಯಾಟದಿ
ಕಣ್ಣನರಳಿಸಿ ಕೇಕೆಹಾಕುತ
ಸಣ್ಣ ಹುಡುಗರ ಹಿಡಿದುಬಡಿವನು
ಮಣ್ಣನೆರಚುತ ಕಣ್ಣಿಗೆ.



ಕಳೆದು ಯೀಪರಿ ಬಾಲ್ಯವನು ತಾ
ತಳೆದ ಹರೆಯದ ಹುರುಪ ಮೆಲ್ಲನೆ
ಎಳೆಯ ಮೀಸೆಯು ಚಿಗುರು ದಾಡಿಯು
ಬೆಳೆದು ಮೆರೆದನು ತರುಣನು.

ತಾರುಣ್ಯ :

ಜುಲ್ಪಿಜುಟ್ಟನು ಬಾಚಿ ಬಿಗಿದು
ಷಿಲ್ಪಿಹೊಡೆಯುತ ಹುಬ್ಬು ಕುಣಿಸುತ
ಸ್ವಲ್ಪವಾದರು ಹೆದರಿಬೆದರದೆ
ಅಲ್ಪತನದಿಂ ದಲೆದನು.

ಧರಗೆ ತಾನವತಾರ ಪುರುಷನು
ಹರಿಹರಬ್ರಹ್ಮಾದಿ ದೇವರು
ಸುರಪತಿಯು ತನಗೆಣೆಯೆ ? ಮಿಕ್ಕಾ
ನರರ ಮಾತೇನೆನ್ನುತ.

ಹಾದಿ ಬೀದಿಯೊಳಲೆದು ಬಂದು
ನದಿಯ ದಡವನು ಸೇರಿನಿಂದು
ಮಿಂದು ಬರುತಿಹ ನಾಡ ಹೆಂಗಳ
ಚೆಂದವನು ತಾ ಮೆಚ್ಚಿದ.

ದಿನಗಳೀಪರಿ ಕಳೆಯುತಿರಲು
ಮನಕೆ ಮೋಹದ ಅಮಲು ಏರಲು
ಶುನಕನಂದದಿ ದಾರಿ ಕಾದನು
ಕನ್ನೆಯೋರ್ವಳ ಕೆಣಕಲು.

ಯೌವನ :

ಮುಂದುಮುಂದಕೆ ನಡೆದು ಬರುತಿಹ
ಮಂದ ಗಮನೆಯ ಹಿಂದೆ ಮೆಲ್ಲನೆ
ಬಂದು ಬಳಸಿ ಅಡ್ಡಗಟ್ಟಿ
ನಿಂದನಾ ಕಲಿರಾಯನು.



'ಹಸಿದವೇಳೆಗೆ ಸಿಕ್ಕಿದೊಡವೆಯ
'ಕಸಿದುಕೊಳ್ಳದೆ ಬಿಡಲು ನೀನು
'ನುಸುಳಿಹೋದರೆ ಮತ್ತೆ ಬರುವೆಯ?
'ಹಸುಳೆ ತಾನಲ್ಲೆ'ಂದನು.

'ದಿಟವ ನಾಡಿದೆ ದುರುಳರಾಯನೆ
'ಹಟವ ಬಿಡದೊಡೆ ತಲೆಯನೊಡೆಯುವೆ
'ಸಟೆಯ ಮಾತಲ್ಲೆ'ಂದು ರೋಷದಿ
ಕಟುಕ ಕನ್ನೆಯು ಚೀರಿದಳ್

'ಅಂಗಿನೋಡೀ ವಸ್ತ್ರನೋಡೀ
'ಉಂಗುರವ, ಕೈಕಡಗ ನೋಡು
'ಅಂಗನೆಯೆ ನಾನಾರು ಬಲ್ಲೆಯ?
'ಕಣ್ಗೆ ಕಾಣುವ ಕಾಮನು!

'ತಿಂಡಿ ಬೇಕೆ? ತೀರ್ಥ ಬೇಕೆ?
'ದುಂಡು ಮಲ್ಲಿಗೆ ಚೆಂಡುಬೇಕೆ?
'ಹಂಡೆ ತುಂಬ ಹೊನ್ನ ಕೊಡುವೆನು
'ಪುಂಡ ತಾನಲ್ಲೆ'ಂದನು.

'ಭಂಡನೀನು, ಪುಂಡ ನೀನು,
'ಹೆಂಡ ಕುಡಿದಿಹ ಮಂಗನೀನು,
'ಮಂಡೆಯೊಡೆಯುವೆ' ನೆಂದುಘರ್ಜಿಸಿ
ಕೆಂಡ ಕರೆಯುತ 'ಚಂಡಿಯು'

'ಮೇಲೆ ಬೀಳುವೆ ನಿನ್ನನೀಗಲೆ
'ಬೀಳಹೊಯ್ವೆನು ನಿನ್ನ ಹೊಟ್ಟೆಯ
'ಸೀಳಿ ಬಿಸುಡುವೆ' ನೆನುತ ಕೋಪದಿ
ಖೂಳರಕ್ಕಸಿ ಕೂಗುತ.

ಬಡಿವೆನೆನ್ನುತಾರ್ಭಟಿಸಿ ರೋಷದಿ
ದಡದಡನೆ ಮುನ್ನುಗ್ಗಿ ಬರುತಿಹ
ಹುಡುಗಿ ನಡಗೆಯ ರಭಸಕಂಜಿ
ಓಡಿಹೋದ 'ಕಿರಾತನು'.

ನಾಡಗೌಡನ ಬಳಿಗೆ ಬಂದು
ಹುಡುಗಿ ನಡೆದುದನೆಲ್ಲ ಪೇಳ್ದಳು
ಸಿಡಿದು ರೋಷದಿ ಗೌಡನೆಂದನು
'ಹಿಡಿದು ಕಡಿವೆವು ಖೂಳನ!'

'ಊರಮಾರಿಯ ಕೋಣನಂದದಿ
'ಕೇರಿ ಕೇರಿಯೊಳೆಲ್ಲ ಅಲೆಯುವ
'ಪೋರ, ಪೋಕರಿ, ಪುಂಡನೀಗಲೆ
ನೀರನೂಕುವೆ'ವೆಂದನು.



ಆರು ಮೈಲಿಗಳೋಡಿ ನಿಂತನು
ಪೋರವೀರನು ಬಳಲಿ ಬೆದರುತ
ಊರಸೇರುವ ಬಯಕೆ ತೊರೆದು
ದಾರಿ ನಡೆದನು ದೂರಕೆ.

'ಹಂಡೆ ಹೊನ್ನನು ಕೊಡುವೆ'ನೆಂದರು
'ಮಂಡೆಯೊಡೆಯುವೆನೆಂಬ ಹೆಂಗಳ
'ಪುಂಡತನವನು ಕಂಡು ಸಹಿಸೆನು
'ಗಂಡುಗಲಿ' ತಾನೆನ್ನುತ.

'ನಾಡ ಹೆಂಗಳ ಗೊಡವೆಗಿಂತಲು
'ಕಾಡು ಮೃಗಗಳ ಒಲವೆಲೇಸು
'ಮೂಢ ಜನರಿಹ ಹಾಳು ಹಳ್ಳಿಯ
'ದೂಡಿ ನಡೆವುದೆ ಚಂದವು!

'ಹಳ್ಳಿಕಾಡಿನ ಒರಟು ಮೂಢರು,
'ಒಳ್ಳಿಮಾತಿನ ಸುಳಿವ ತಿಳಿಯರು
'ಕೊಳ್ಳಿಯಿಡುವರು ಬಳಿಗೆ ಕರೆದರೆ
'ಹಳ್ಳಿವಾಸವು ಸಲ್ಲದು.'

ಎಂದು ನಡೆದನು ಮುಂದುಮುಂದಕೆ
ಹಿಂದೆ ಹಿಂದಡಿಗಡಿಗೆ ನೋಡುತ
ಪಂದೆಯಂದದಿ ಬೆಚ್ಚಿಬೆದರುತ
ಹಂದಿ ಹೋಲುವ 'ಕಾಮನು'.



ವಾನಪ್ರಸ್ಥ:

ಯುವಕ ನೀಸರಿ ಹೊರಟು ತನ್ನಯ
ಯೌವನಾವಸ್ಥೆಯನು ಕಳೆಯಲು
ಭವ್ಯವಾಗಿಹ ನಗರವೊಂದನು
ದಿವ್ಯತೇಜದಿ ಹೊಕ್ಕನು.

ಗಾಯಗೊಂಡಿಹ ಕರಡಿಯಂದದಿ
ಲಾಯ ತಪ್ಪಿದ ಕುದುರೆಯಂದದಿ
ಪ್ರಾಯದಮಲಲಿ ಕಣ್ಣೆ ಕಾಣದೆ
ಮಾಯವಾದನು 'ಮಾರನು'

— ಬುಳ್ಳ.

ಭಾಗ್ಯರೇಖೆ

ಭಾಗ್ಯರೇಖೆ ಬೇಕೋ, ಆಸ್ತಿಯ ಗಂಟು ಬೇಕೋ ಎಂದು ನನ್ನನ್ನು ಕೇಳಿದರೆ, ರೇಖೆಯೇ ಸಾಕು ಎಂದು ಹೇಳುತ್ತೇನೆ. ಗಂಟೇನೋ ಒಳ್ಳೆಯದೇ; ಮೋಟಾರು, ವಜ್ರದ ಬೆಂಡೋಲೆ, ಜಾರ್ಜೆಟ್ಟು, ಕಾರ್ಪೆಟ್ಟು, ಬಂಗ್ಲೆ, ಭಕ್ಷ್ಯ ಇತ್ಯಾದಿ ಮನಸ್ಸು ಬಂದ ಹಾಗೆಲ್ಲಾ, ಹುಚ್ಚು ಹರಿದ ಹಾಗೆಲ್ಲಾ ವೆಚ್ಚಮಾಡಬಹುದು. ಆದರೆ, ಈ ಹಾಳು ಪ್ರಪಂಚದಲ್ಲಿ ಗಂಟಿನಷ್ಟು ಸುಲಭವಾಗಿ ಕರಗುವ ಪದಾರ್ಥ ಬೇರೊಂದಿಲ್ಲ. ಕರಗಿದ ಮೇಲೆ ಕಿರುಕುಳದ ಮೇಲೆ ಕಿರುಕುಳ! ಆದರೆ, ಭಾಗ್ಯರೇಖೆಯಿದ್ದರೆ, ಒಂದು ಉಂಗುರವೋ, ಅದ್ಭುತ ದ್ವೀಪವೋ ಕೈಗೆ ಬರುತ್ತದೆ. ಅದನ್ನ ಸಾಕ್ಷಾತ್ ಅರೇಬಿಯನ್ ರೀತಿಯಲ್ಲಿ ಉಜ್ಜಿದರೆ ಸರಿ, ಬೇಕಾದುದೆಲ್ಲ ಸಿಗುತ್ತದೆ. ಅಥವಾ ಅವುಗಳಿಗೆ ಬದಲಾಗಿ ಹಲವಾರು ಶ್ರೀಮಂತರನ್ನು ಉಜ್ಜಿದರೂ ಸಾಕು.

ನಾನು ಗಂಟು ಸಹಿತ ಹುಟ್ಟಿದೆ; ಕಿಟ್ಟು ಕೈಯಲ್ಲಿ ರೇಖೆಯಿತ್ತು. ಈಗ ನೋಡಿ, ನಮ್ಮ ಆಜಗಜಾಂತರವನ್ನ.

ನನ್ನ ಗಂಟು ಕರಗಿ ಪ್ರಪಂಚದಲ್ಲೆಲ್ಲಾ ಹರಡಿದೆ. ಶ್ರೀಮನ್ ಹೆನ್ರಿ ಫೋರ್ಡ್‌ರವರಿಗೆ ಕೆಲವು ಸಾವಿರ ರೂಪಾಯಿಗಳು ಸಿಕ್ಕಿದುವು. ಆತ ಕೊಟ್ಟ ಮೋಟಾರೇನೋ ಕಬ್ಬಿಣದ ಬೆಲೆಯ ಅರ್ಧಕ್ಕೆ ಅಡವಾಗಿ, ಮಾರ್ವಾರಿ ಗಡಂಗಿನ ಮೂಲೆಯಲ್ಲಿ ಮುದುರಿಕೊಂಡಿದೆ. ಆದರೆ ನಾನು ಕೊಟ್ಟ ಹಣವನ್ನ, ಹೆನ್ರಿ ಫೋರ್ಡನ್, ಈಗ ಹತ್ತರಷ್ಟು, ನೂರರಷ್ಟು ಬೆಳೆಸಿರುತ್ತಾನೆ. ನನ್ನ ಗಂಟಿನ ತುಂಡುಗಳನ್ನು ಹೊಗೆ ಅಂಗಡಿಯವರು, ಬ್ರಾಂದಿ ಅಂಗಡಿಯವರು, ಬೂಂದಿ ಅಂಗಡಿಯವರು, ಬಯಸ್ಕೋಪಿನವರು, ಬುಡುಬುಡಿಕೆಯವರು, ಚಂದಾ ಎತ್ತುವ ಚಂ........ಲರು (ಗವರ್ನರ್ ಸಾಹೇಬರಿಗೆ ತಟ್ಟೆ ತುಂಬ ಸ್ತೋತ್ರ, ಬಟ್ಟಲು ತುಂಬ ಟೀ ಕೊಡುವುದಕ್ಕೆ ಚಂದ, ಹಳೇ ವಿಧವೆಗಳನ್ನ ಹೊಸ ವಧುಗಳಾಗಿ ಮಾಡಿ ಪೆಚ್ಚು ಹಿಡಿದ ವರರಿಗೊಪ್ಪಿಸಲು ಚಂದಾ) ನುಂಗಿ ನೀರು ಕುಡಿದಿದಾರೆ. ಸಾಲದ್ದಕ್ಕೆ ಕುದುರೆ ಜೂಜಿಗೆ ಬುಕ್ಕಿಗಳು ಬೇರೆ! ನನ್ನ ಗಂಟಿನಿಂದ ಬೊಜ್ಜು ಬೆಳೆಸಿಕೊಂಡಿರುವವರನ್ನು ನೀವು ಎಲ್ಲೆಲ್ಲೂ ನೋಡಬಹುದು. ಆದರೆ ನಾನು, ಪತ್ರಿಕೋದ್ಯೋಗಿಯ ಪದವಿಯೆಂಬ ಪಾತಾಳಕ್ಕೆ ಇಳಿದಿದೇನೆ. ಯಾರಾದರೂ ಸಂಪಾದಕರು ಅಜ್ಞಾನದಲ್ಲಿ ನನ್ನ "ಕವಿ ಹೃದಯದ ಭವ್ಯತೆ" ಎಂಬ ಲೇಖನವನ್ನು ಪ್ರಕಟಿಸಿ ಕಾಸುಕೊಟ್ಟರೆ, ಉಂಟು. ಆದರೆ ಈಗ, ಕವಿಹೃದಯ, ಕೋಗಿಲೆ, ಕೋಲ್ಮಿಂಚು ಇವುಗಳು ಯಾರಿಗೆ ಬೇಕಾಗಿದೆ? ಪತ್ರಿಕೋದ್ಯೋಗಿ ಆಗುವ ಮೊದಲು, ಚಲನ ಚಿತ್ರ ತಾರೆಯಾಗಿದ್ದರೆ, ಅಖಿಲ ಭಾರತ ಪೈಲ್ವಾನ್ ಆಗಿದ್ದರೆ,

ಒಂದೇ ಔಷಧಿಯ ಡಾಕ್ಟರಾಗಿದ್ದರೆ, ಭಾರತದ ಕಾರ್ಯದರ್ಶಿಯಾಗಿದ್ದರೆ, ನನ್ನ ಲೇಖನಗಳಿಗೆ ಬೆಲೆಯುಂಟು. ಏನಿಲ್ಲವೆಂದರೂ, ಟೇಬಲ್ ಕ್ಲಾತ್‌ನ ಮೇಲೆ ಚೆಲ್ಲಿದ ಶಾಯಿಯ ಗುರುತನ್ನು ತೆಗೆಯುವ ವಿಧಾನವಾದರೂ ಗೊತ್ತಿರಬೇಕು. ಹಾರ್ಮೋನಿಯಮ್ಮಿನ ಮೇಲೆ ಬಿದ್ದು, ಎಲೆ ಅಡಿಕೆ ಉಗುಳಿನ ಗುರುತನ್ನಾದರೂ ತೆಗೆಯಲು ಬರಬೇಕು. ಕೇವಲ ಡಬ್ಬಣಸಾಲದಿಂದಲೇ ಪಾಯಸ ಮಾಡುವ ವಿಧಾನ ಗೊತ್ತಿರಬೇಕು. ನನ್ನಂತಹ ಮೂಢನಿಗೆ ಮೂರು ಕಾಸು ಹುಟ್ಟುವುದಿಲ್ಲ ....ಇದು ನನ್ನ ಅವಸ್ಥೆ.

ನಾನು ಶ್ರೀಮಂತನಾಗಿ ಹುಟ್ಟಿದೆ. ಕಿಟ್ಟು, ಕೂಸಾಗಿ ಹುಟ್ಟಿದ; ಬಾಯಲ್ಲಿ ಬೆಳ್ಳಿ ಚಮಚ ಇಲ್ಲದ, ಮರದ ಹೋಳಲೆ ಕೂಡ ಇಲ್ಲದ ಕೂಸು. ಅವನ ತಂದೆ ಮೇಷ್ಟ್ರು. ಅಂದ ಮೇಲೆ ಗೊತ್ತೇ ಇದೆ, ಸಾಕ್ಷಾತ್ ಸುದಾಮ. ಚಾಕರಿಯಲ್ಲಿದ್ದು ಹಣ ಸಂಪಾದಿಸಬೇಕಾದರೆ, ವ್ಯಾಪಾರ ಸ್ಥಳದಲ್ಲಿ ಗುಡ್ಸ್ ಕ್ಲಾರ್ಕ್ ಆಗಬೇಕು. ಸೋಮಾರಿ ಜಡ್ಜ್ ಇರೋ ಸಿವಿಲ್ ಕೋರ್ಟಿನಲ್ಲಿ ಹೆಡ್‌ಕ್ಲಾರ್ಕ್ ಆಗಬೇಕು. ಆದರೆ, ಮೇಷ್ಟ್ರು! ಪಾಪ! ಅವರಿಗೆ ಸಿಗುವುದು ಉಪನ್ಯಾಸಗಳೇ. ಉಪಾಧ್ಯಾಯ ವೃತ್ತಿಯ ಮಾಹಾತ್ಮ್ಯ, ಮುಂದಿನ ಜನಾಂಗವನ್ನು ರೂಪುಗೊಳಿಸುವ ಮಹತ್ಕಾರ್ಯದ ಜವಾಬ್ದಾರಿ—ಇತ್ಯಾದಿ, ಇತ್ಯಾದಿ. ಕಿಟ್ಟು ತಂದೆಗೆ ಲೋಕಾನುಭವ ಕಡಿಮೆ, ಗೊಣಗಾಟ ಜಾಸ್ತಿ, ಬುದ್ಧಿ ಕೊಂಚ ವಕ್ರ. ದಿನವೂ ಏಳೋದು ಎಡಮಗ್ಗಲು! ಇಪ್ಪತ್ತು ಸ್ಕೂಲಿಗೆ ತರ್ಪಣ ಬಿಟ್ಟವರು; ಇಪ್ಪತ್ತೈದು ಮ್ಯಾನೇಜಿಂಗ್ ಕಮಿಟಿಯವರ ಹತ್ತಿರ ಜಗಳವಾಡಿದವರು. ಈಗ, ಸರ್ಕಾರದ ಮೇಲೂ, ವಿದ್ಯಾಭ್ಯಾಸದ ಅಡಳಿತಗಾರರ ಮೇಲೂ ಯದ್ವಾತದ್ವಾ ಆರೋಪಣೆಗಳನ್ನು ಮಾಡುತ್ತಿರುವರು. ಅವರ ಅತ್ಯಂತ ಹೆಮ್ಮೆಯ ವಿಷಯವೇನೆಂದರೆ, ಅವರ ಕೆಳಗೆ ಕಾಗುಣಿತ ಕಲಿತವರೊಬ್ಬರು ಹೈಕೋರ್ಟು ಜಡ್ಜಾಗಿದಾರೆ. ಅತನನ್ನ 'ಮರಿ, ಮರಿ' ಎಂದು ಹೇಳುವುದರಲ್ಲೇ ಅವರಿಗೊಂದು ತೃಪ್ತಿ.

ಅವರ ಜೀವನದ ಅತ್ಯಂತ ದೊಡ್ಡ ಆಸೆ ಏನೆಂದರೆ, ಒಂದು ಹೊಸ ಮಾದರಿಯ ರೀಡರ್ ಬರೆದು ಪ್ರಕಟಿಸುವುದು. ಆದರೆ, ಯಾವ ಪರಂಗಿ ಕಂಪನಿಯವರೂ ಅದನ್ನು ಪ್ರಕಟಿಸಲು ಒಪ್ಪಲಿಲ್ಲ. ಒಬ್ಬರು ಪರಂಗಿಯವರ ಹೆಸರನ್ನು ಗ್ರಂಥಕರ್ತ ಎಂದು ಪ್ರಕಟಿಸದೆ ಹೋದರೆ, ರೀಡರನ್ನು ಅಚ್ಚುಮಾಡಲು ತಾವು ಒಪ್ಪುವುದಿಲ್ಲವೆಂದು ಅವರು ಹೇಳಿದರು. ಕಡೆಗೊಬ್ಬ ಬಡ ಪರಂಗಿಯವನೂ ಸಿಕ್ಕಿದ. ರೀಡರೂ ಹೊರಬಿತ್ತು. ಆದರೆ, 'ಕ್ಯಾಟ್' ಎಂಬ ಪದದಿಂದ ಪ್ರಾರಂಭವಾದ ಆ ರೀಡರನ್ನು ಅಪ್ಪಂದಿರು ಒಪ್ಪಲಿಲ್ಲ. ಪುಸ್ತಕ ತೆರೆದಾಗಲೇ ಬೆಕ್ಕು ಅಡ್ಡ ಬಂದರೆ, ಅಮಂಗಳವಲ್ಲವೇ? ಕೂತಿದ್ದ ಬೆಕ್ಕು ಅಮಂಗಳವಾದರೆ,—'ಎ ಕ್ಯಾಟ್ ರ್ಯಾನ್'—ಅಡ್ಡವಾಗಿ ಓಡುವ ಬೆಕ್ಕು ಶುದ್ಧ ಅಪಶಕುನ. ರಾಮು, ಕೃಷ್ಣ ಅಂತ ಮಕ್ಕಳ ಬಾಯಲ್ಲಿ ಮೊದಲು ಅನ್ನಿಸಬಾರದೇ ಎಂಬ ಗುಲ್ಲೆದ್ದಿತು. ಸ್ಥಳೀಯ ನ್ಯಾಯವಿಧಾಯಕ ಸಭೆಯಲ್ಲೂ ಪ್ರಶ್ನೋತ್ತರಗಳಾದುವು.

೧. ಇಂಥಾ ರೀಡರು ಶಾಲೆಗಳಲ್ಲಿ ಪ್ರಚಾರಕ್ಕೆ ಬರುತ್ತಿರುವುದು ವಿದ್ಯಾ ಮಂತ್ರಿಯ ತಿಳುವಳಿಕೆಗೆ ಬಂದಿದೆಯೇ?

೨. ಹಾಳೆಗಳನ್ನು ಮಗುಚುತ್ತಲೂ ಅಪಶಕುನದ ಬೆಕ್ಕು ಕಾಣಿಸುವ ರೀಡರನ್ನು ಮಕ್ಕಳ ಕೈಗೆ ಕೊಡಬಾರದೆಂದು ಪೋಷಕರು ದೇಶದ ನಾನಾ ಭಾಗ ಗಳಲ್ಲಿ ಸಭೆ ಸೇರಿ ನಿರೋಧ ಮಾಡುತ್ತಿರುವುದು ಗೊತ್ತೆ?

೩. ಪರಂಗಿಯವರ ಕಣ್ಣಿಗೆ ಕರೀ ಬೆಕ್ಕು ಯಾವ ರೀತಿ ಕಂಡರೂ, ಹಿಂದೂ ಜನಾಂಗಕ್ಕೆ, ಮಾರ್ಜಾಲ ಮಂಗಳಕರವಲ್ಲವೆಂಬುದನ್ನು ವಿದ್ಯಾಮಂತ್ರಿಗಳು ಬಲ್ಲರೆ?

೪. ಕೂಡಲೇ ಎಲ್ಲಾ ಶಾಲೆಗಳಿಂದಲೂ ಈ ಅನಿಷ್ಟವನ್ನು ಹೊರಗೆಸೆಯಲು ತಕ್ಕ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆಯೇ?

ಸಭೆಯ ಅಭಿಪ್ರಾಯಕ್ಕೆ ವಿದ್ಯಾಮಂತ್ರಿಗಳು ತಲೆಬಾಗಿದರು. ರೀಡರಿನ ಗತಿ ಪೂರೈಸಿತು. ಕಿಟ್ಟು ತಂದೆ ಬಡವರಾಗಿಯೇ ಉಳಿದರು

ಆದರೂ ಅವರು, ಮೊದಲಿಂದಲೂ ಕಿಟ್ಟುವಿನ ಸ್ವಭಾವ ವಿಶೇಷಗಳನ್ನು ಅರಿತು, ಅವುಗಳಿಗೆ ತಕ್ಕಂತೆ ಅವನು ತನ್ನ ಮುಂದಿನ ಜೀವನವನ್ನು ನಡೆಸುವ ಹಾಗೆ ವಿದ್ಯಾಭ್ಯಾಸ ಕೊಡಿಸಲು ನಿಶ್ಚಯಿಸಿದರು. ಮೊದಲನೆಯ ಹನ್ನೆರಡು ತಿಂಗಳಲ್ಲಿ, ಕಿಟ್ಟುವಿನ ಸ್ವಭಾವದಲ್ಲಿ ವಿಶೇಷವೇನೂ ಕಾಣಿಸಲಿಲ್ಲ; ಸದಾ ಗಟ್ಟಿಯಾಗಿ ಕಿರಿಚುತ್ತಿದ್ದ. ಆದ್ದರಿಂದ, ಅವನು ಮುಂದಕ್ಕೆ ಬಸ್‌ಸ್ಟಾಂಡಿನಲ್ಲಿ ಪೇಪರ್ ಮಾರಬಹುದು, ಎರಡೂವರಾಣೀ-ಮೇ ವ್ಯಾಪಾರಿಯಾಗಬಹುದು, ಹರಾಜ್ ಕಂಪೆನಿ ಕೂಗುದಾರನಾಗಬಹುದು, ಅಂತ ಅವನ ತಂದೆಗೆ ತೋರಿತು. ಆ ಮೇಲೆ ಅವನು ಆಹಾರದಲ್ಲಿ ಹೆಚ್ಚು ಅಭಿಲಾಷೆ ತೋರಿಸಿದ. ಬಾಯಿಲಿ ಬರುವಷ್ಟು ತಿಂದುಹಾಕಿಬಿಡುತ್ತಿದ್ದ. ಆದ್ದರಿಂದ ಅವನು ರೈಲ್ವೆ ರಿಫ್ರೆಷ್‌ಮೆಂಟ್ ರೂಮು ಗಳ ಇನ್ಸ್‌ಪೆಕ್ಟರ್ ಆಗಬಹುದು ಎಂದು ಅವರು ಯೋಚಿಸಿದರು. ಆ ಮೇಲೆ, ಆಗಾಗ್ಗೆ ಲಾಯರ್ ಆಗಬಹುದು, ಶಿಲ್ಪಿಯಾಗಬಹುದು, ಪಶುವೈದ್ಯನಾಗಬಹುದು, ಅಗ್ರಿಕಲ್ಚರಲ್ ಡೈರೆಕ್ಟರಾಗಬಹುದು, ಎಂದು ಅವರು ಊಹಿಸಿದರು ಕಿಟ್ಟು ಮಾತ್ರ, ನಾನು ಯಾವುದೂ ಆಗುವುದಿಲ್ಲ, ಇತರರ ಹಣ ಹೀರಿ ಹೆಗ್ಗಣವಾಗು ತ್ತೇನೆ ಅಂತ ಒಳಗೇ ಸಂಕಲ್ಪಮಾಡಿದ್ದ.

ನಾನೂ ಕಿಟ್ಟುವು ಒಂದೇ ಶಾಲೆ, ಒಂದೇ ಬೆಂಚು. ಮೇಲಿನ ತರಗತಿಗೆ ಹೋಗಲು ಅನುಕೂಲವಾಗುವುದಕ್ಕಾಗಿ ನನಗೆ ಕಿಟ್ಟು ತಂದೆಯನ್ನೇ ಮನೆ ಮೇಷ್ಟ್ರಾಗಿಟ್ಟಿದ್ದರು. ಸರಿ, ನಮ್ಮ ಮನೆ ಕಾರಿನಲ್ಲೇ ಕಿಟ್ಟು ಶಾಲೆಗೆ ಹೋಗು ವುದು, ನನ್ನ ಪುಸ್ತಕಗಳನ್ನೇ ಓದುವುದು, ನನ್ನ ಲೆಕ್ಕದಲ್ಲೇ ತಿಂಡಿ ತೀರ್ಥ, ಹೀಗಾಗಿ ಮುಂದಕ್ಕೆ ಯಾರ ಯಾರ ಕಾರಿನಲ್ಲೋ ಓಡಾಟ, ಯಾರ ಯಾರ

ಸಂತರ್ಪಣೆಗಳಲ್ಲೋ ಊಟ, ಯಾರ ಬಂಗಲೆಯಲ್ಲೋ ವಾಸ, ಹೀಗೆ ಕಾಲ ಕಳೆದ. ಕೊನೆಗೆ, ಎಲ್ಲರೂ ಹೀಯಾಳಿಸಿ ಅವನಿಗೇ ನಾಚಿಕೆಯಾಗಿ, ಎಲ್ಲಿಗೋ ಪರಾರಿಯಾದ! ಪತ್ತೆಯಿಲ್ಲದಾದ.

ಎರಡು ವರ್ಷಗಳ ಹಿಂದೆ ನಾನೆಲ್ಲೋ ಹೋಗಿದ್ದಾಗ, ಆ ಊರಿನ ದೇವರ ಗುಡಿ ಮುಂದೆ, ಕಿಟ್ಟು ಕೂತಿದ್ದ! ಸಂಪೂರ್ಣ ಬದಲಾವಣೆ. ತಲೆಯೆಲ್ಲ ಕಲಾಯಿ, ಬರೀ ಲಂಗೋಟಿ, ಮರದ ಮೆಟ್ಟು, ರುದ್ರಾಕ್ಷಿ ಸರ, ಸ್ವಲ್ಪ ದೂರದಲ್ಲೇ ಅತಿ ವಿನಯದಿಂದ ನಿಂತಿರುವ ಒಬ್ಬ ಶಿಷ್ಯ ಶಿಖಾಮಣಿ! "ಇದೇನಯ್ಯಾ ಕಿಟ್ಟೂ, ಎಲ್ಲಿ ಹಾಳಾಗಿ ಹೋಗಿದ್ದಿ ಇಷ್ಟು ದಿವಸ? ಇದೇನಿದು, ಬೂದಿ" ಅಂದೆ.

"ರಾಂ...... ರಾಂ" ಅಂದ.

"ರಾಂ ರಾಂ? ರಾಂ ರಾಂ ಹಾಳಾಗಿ ಹೋಗಲಿ, ಇದೇನಿದು ನಿನ್ನ ಆಟ?" ಅಂದೆ.

"ರಾಂ ರಾಂ........ರಾ ಾ ಂ........ರಾ ಾ ಾ ಂ........ರಾ ಾ ಾ ಂ" ಅಂದ.

"ಬಿಡೋ ಬೂಟಾಟಿಕೇನ" ಅಂತ ಅವನ ಭುಜ ಹಿಡಿದಲ್ಲಾಡಿಸಿದೆ. ಆಗ ಶಿಷ್ಯ ಅಡ್ಡ ಬಂದು,

"ಗುರೂಜಿ........ವೈ ಗುರೂಜಿ, ಮಹಾತ್ಮಾ ಆನಂಧ್ ಸರಸ್ವತಿ........" ಅಂದ.

"ಏನು?" ಅಂದೆ.

"ಸಚ್.........ಸಚ್ ಹೈ. ಹಿಮಾಲಯಾಮೇ ವಾಪಸ್ ಬಂದ್ರು........ ಮಹಾತ್ಮಾ........ಆನಂಧ್ ಸರಸ್ವತಿ........ಗುರೂಜೀಕೇ.........ಉಪದೇಶ್........ ಏಕ್ ಮಹರ್ಷಿ ಕೊಟ್ರು............ಕೊಟ್ಟು............ಏಕ್ ನಿಮಿಷ್ದೊಳ್ಗೆ ಆಕಾಶ್ಕೆ ಹೊರಟ್ರು........" ಅಂದ.

"ಅದ್ಯಾಕಪ್ಪಾ ಹಾಗೆ ಮಾಡಿದ? ಕೊಟ್ಟ ಉಪದೇಶ ಫಲಿಸೋ ತನಕ ನಿಲ್ಲೋದಲ್ಲವೇ ನ್ಯಾಯ?" ಅಂದೆ. "ಹೋಗೋ ಹೋಗೋ, ಇವನು ಮಹಾತ್ಮನಾದರೆ, ನಾನು ಮಿಕಾಡೋ" ಅಂದೆ. ಅಲ್ಲಿಂದ ಹೊರಟು ಬಂದೆ ಕೋಪವಾಗಿ.

ಮೊನ್ನೆ ಅದೇ ಊರಿಗೆ ಯಾವುದೋ ಕೆಲಸಕ್ಕಾಗಿ ಹೋಗಿದ್ದೆ. ದೇವಸ್ಥಾನದೆದುರು, ಅರಮನೆಯಂತಹ ಒಂದು ದೊಡ್ಡ ಬಂಗಲಿ ಇತ್ತು! ಸುತ್ತಲೂ ರಮ್ಯವಾದ ಉದ್ಯಾನವನ. ಅದೇ ಮಹಾತ್ಮಾ ಆನಂಧ್ ಸರಸ್ವತಿ ಆಶ್ರಮ! ಭಕ್ತಾದಿಗಳಿಂದ ಬಂದ ಕಪ್ಪಕಾಣಿಕೆ ಹಣದಿಂದಲೇ ಎತ್ತಿದ ಸೌಧ! ಹೊರಗಡೆ ರಸ್ತೆಯಲ್ಲಿ ಮೂರು ಕಾರುಗಳು ನಿಂತಿದ್ದವು. ಫಲಪುಷ್ಪಾದಿ ಪೂಜಾ ಸಾಮಗ್ರಿ

ಗಳೊಂದಿಗೆ ಹೆಂಗಸರು ಮಕ್ಕಳು ತಂಡೋಪ ತಂಡವಾಗಿ ಹೋಗಿ ಬರುತ್ತಿದ್ದರು. ಶಿಷ್ಯರೂ, ಶಿಷ್ಯೆಯರೂ, ಸ್ವಾಮಿಗಳ ಸೇವೆಗಾಗಿ ಎಂಟು ಮೂಲೆಗಳಲ್ಲೂ ಸಿದ್ಧ ರಿದ್ದರು. ಪ್ರಪಂಚದ ನಾನಾ ಭಾಗಗಳಿಂದ ಬಂದ ಮನ್ನಿಯಾರ್ಡರುಗಳಿಗೆ ರುಜು ಹಾಕುತ್ತಾ, ಸ್ವಾಮಿಗಳ ಖಾಸಾ ಕಾರ್ಯದರ್ಶಿಯೊಬ್ಬ ವರಾಂಡದಲ್ಲೇ ಕುಳಿತಿದ್ದ. ಮಹಾತ್ಮರ ಪತ್ನಿಯೂ ಕೂಡ ಶಿಷ್ಯೆ ವರ್ಗದಲ್ಲಿ ಸೇರಿ, ಕಿವಿ ಮೂಗುಗಳಲ್ಲಿ ಕಲ್ಲು ಗಳನ್ನೇ ಧರಿಸಿ, ಚೀನಾಂಬರ ಧಾರಿಯಾಗಿ ಓಡಾಡುತ್ತಿದ್ದರು. ಸ್ವಾಮಿಗಳು ಒಂದು ಸೋಫಾದ ಮೇಲೆ ಬೊಜ್ಜು ಬೆಳೆದ ಬುದ್ಧನ ಹಾಗೆ ಅಲ್ಲಾಡದೆ ಬಿದ್ದಿದ್ದರು. ನಾನು ಒಳನುಗ್ಗಿ ದರ್ಶನ ತೆಗೆದುಕೊಳ್ಳಲು ಪ್ರಯತ್ನಿಸಿದೆ. ಆದರೆ, ಚಕ್ರವರ್ತಿ ಸಾರ್ವಭೌಮರ ದರ್ಶನವಾದರೂ ಸುಲಭದಲ್ಲಿ ದೊರೆಯಬಹುದು. ಆತನ ದರ್ಶನ ಬಾಗಿಲ ಸಂದಿನಿಂದಲೇ ದೊರೆಯಿತು. ಹೊಟ್ಟೆಯ ಅತ್ಯಲ್ಪ ಭಾಗಮಾತ್ರ ಕಾಣಿಸಿತು.

ಭಾಗ್ಯರೇಖೆ ಅಂದರೆ ಕಿಟ್ಟೋದು.

———o———

ಊರ ಮಿಲ್ಲುಗಳಲ್ಲಿ, ದೂರ ಹಳ್ಳಿಗಳಲ್ಲಿ, ಹಗೆವಲ್ಲಿ, ಗುಳಿಯಲ್ಲಿ, ಪೀಪಪೆಟ್ಟಿಗೆ ಚೀಲ ಟ್ರಂಕು ಡಬ್ಬಡಬರಿಗಳಲ್ಲಿ, ರಾಗಿ, ಜೋಳ, ಭತ್ತಗಳ ಮರೆಮಾಚಿ, ಕರಿಯ ಪೇಟಿಗೆ ದೋಚಿ, ಒಂದಕ್ಕೆ ಮೂರು ಬಾಚುವ ದಳ್ಳಾಳಿ ಖುಳ್ಳಾಳಿ ವರ್ತಕ ಪ್ರವರ್ತಕ ಶ್ರೇಷ್ಠಿ ಗೋಷ್ಠಿಗಳೆಂಬ ಮಡಿಕೆಗಳಿಗೆ ನಮ್ಮ ಸರಬರಾಜರದೊಂದು ದಡಿಸಾಲದೆ? ಕೇಳಿದಳು ನಮ್ಮ ಅಪರಂಜಿಯ ಕೊರವಂಜಿ ದೇವಿ.

(ವಚನ)

ಇಂತಹ ಸನ್ನಿವೇಶದಲ್ಲಿ ಓಟರುಗಳು ಪೋಲಿಂಗ್ ಬೂತುಗಳಿಗೆ ಹೋಗುವು ದಾದರೂ ಹೇಗೆ?

(ದಿನಪತ್ರಿಕೆ)

ಅದೇ ಪತ್ರಿಕೆಯಲ್ಲಿ ಬರುವ ನಗರ ಸಂಚಾರಿಯ ಡೈರಿಯನ್ನು ಓದಿದ ಮೇಲಂತೂ ಹೊರಕ್ಕೆ ಕಾಲಿಡಲು ಮನಸ್ಸು ಬರುವುದೇ ಇಲ್ಲ.

* *

ಕಾಲೇಜ್ ಕ್ಲಾಸನು ನೆನೆದೆನು ಎಂದರೆ?

ಕಾಲೇಜು ಕ್ಲಾಸನು ನೆನೆದೆನು, ಅಂದರೆ,
ಕಾಲದ ಕರಿತೆರೆ ಸರಿಯುತಿದೆ.
ಕಣ್ಣುಗಳೆರಡಲು ಕೋಲಾಹಲವದು,
ತುಂಬುತಿದೆ, ತುಳುಕಾಡುತಿದೆ!
ಬಾರದ ಡಿಗ್ರಿಯು ನೆನಪೇ ಬರದು!
ಆ ಹಾಸ್ಟಲಲಿ, ಆ ಲೆಕ್ಚರಲಿ, ಬಾಯ್ಬುಟರಾರ್ಭಟ ಕೇಳುತಿದೆ!
ಆ ಹೋಟಲಲಿ, ಆ ಕೂಟದಲಿ,
ಬಟ್ಲಲು ಬಸಿಗಳ ಖಣಿ ಖಣಿ ಸಾದ
ಚಮಚನ ಚೀಪುವ, ಚುಮುಚುಮು ನಿನಾದ,

ಬ್ಯಾಟೂ ಚೆಂಡೂ ತಗಲುವ ಸಮಯದಿ,
ಠಕ್ ಠಕ್ ಎಂಬೋ ಠೇಂಕಾರ,
ಗುಂಡಾ! ಬೋಳಾ! ನುಗ್ಗೋ, ತೋಳಾ!
ಒಬ್ಬರಿಗೊಬ್ಬರ ಪ್ರೋತ್ಸಾಹ!
ಪಿಂಗ್ ಪಾಂಗ್ ಚೆಂಡಿನ ಹಾಂಗೂ, ಹೀಂಗೂ,
ಸಿನಿಮಾ ತಾರೆಯ ದುನಿಯಾ ರಂಗೂ,
ಕಿವಿಗವಿಯೊಳಗಡೆ ನಲಿಯುತಿದೆ,
ಟಿಂಪನ ಕಿಂಪನು ಊಡುತಿವೆ!.........ಆ

ಷೋಕೀಲಾಲರ ತಂಡವ ಕಂಡು,
ಬಾಕೀ ಸಾಲದ ಭಂಡರ ಕಂಡು,
ಎದೆ ಬಿರಿಯುತಿದೆ, ಮೈ ಉರಿಯುತಿದೆ!
ಲೇಡೀಸ್ ಹಿಂದೆಯೆ ಕುಣಿಯುವ ಮುಂದಿಯು
ಚಾಡೀ ಹೇಳುವ ಹೇಡೀ ಹುಡುಗರ
ಕೆನ್ನೆಗೆ ಸುಡು ಸುಡು ಬಿಡಬೇಕೆಂದು,
ಎನ್ನಯ ಕೈಗಳು ತುಡುಕುತಿವೆ!
ಪುಸ್ತಕ ಕೀಟಗಳೆಷ್ಟೊಂದಲ್ಲಿ!
ಅಸ್ತವ್ಯಸ್ತದಿ ಬಿದ್ದಿವೆ ನೋಡು!
ಬುರುಡೆಯು ಸಾಣೆಗೆ ಹಿಡಿವರು,—ಅಯ್ಯೋ!
ಗುರುಗಳು ನೋಡಲ್ಲಿ!

ನೋಟ್ಸನು ಬರೆಸೀ ಬರೆಸೀ ಬರೆಸೀ,
ಹುಡುಗರು ಎಮ್ಮೆಗಳಾಗುವರು ! ಅಯ್ಯೋ, ನೋಡಲ್ಲಿ !
ಸಂತೆಯ ಹೊತ್ತಿಗೆ ನೆಯ್ಯುವ ಜಡೆತೆಯು
ಕುಂತಿದೆ ನೋಡಲ್ಲಿ !
ಯಾರದು ಅಲ್ಲಿ ? ನಸು ದೂರದಲಿ ?
ನಿಂತಿರುವುದು, ಒಸಿ ಕ್ರೂರದಲಿ ?
ಬೋರ್ಡಿನ ತುದಿಯಲಿ, ನಂಬರ ಹೋರ್ಡುತ ?
ಆಹಾ, ತಿಳಿಯಿತು, ನಿಲಯದ ಡೀನನು
ಹೆಸರನು ಹೇಳುವ ನಿಲಯದ ದೀನನು
ಪದಕಗಳನ್ನೂ, ಪದವಿಗಳನ್ನೂ,
ಪರರಿಗೆ ನೀಡುವನಿನ್ನೂ, ಇನ್ನೂ !
ಜಗ ಮೋಹನ ಮಹಲಿನಲಿ,
ಏನಿದು ತೋರಣ ? ಯಾವುದು ಸಡಗರ ?
ನಡೆಯಿರಿ ನುಗ್ಗಿರಿ ಗುಂಪಿನಲಿ,
ಮುಂದಾಗುವುದನು ಈಕ್ಷಿಸಿರಿ
ಭೀಮನು ಬೀಟೆಯೆ ? ರಾಮನು ಬೀಯೇ ?
ಶಾಮನು ಎಮ್ಮೆಯೆ ? ಸೋಮನು ಕಮ್ಮಿಯೆ ?
ಇದಾವ ನ್ಯಾಯ ?
ಏನನ್ಯಾಯ !
ಯುವಕನೆ ಬಾ, ತೆಗೆ, ಪೇನವನು
ಬರೆ, ಮಹಾ ನೂಡುವುದೇನವರು ?
ಶಾಪದ ಶಾಯಿಯಲದ್ದು, ಗೀಚು !
ಬರೆಯನು ಹಾಕುತ ಬರೆ, ಬರೆ, ಗರಗರ

....

ಛೆ !

....

ಕಾಲೇಜು ಕ್ಲಾಸನು ನೆನೆದೆನು ಅಂದರೆ
ಕಾಲದ ಕರಿತೆರೆ ಸರಿಯುವುದು,
ಬಾರದ ಡಿಗ್ರಿಯ ನೆನಪಾಗುವುದು !
ಅತ್ತೆ, ಮಾವ, 'ಹುಚ್ಚಾ' ಎಂಬರು !
ಸುತ್ತಲ ಗೆಳೆಯರು, 'ಪೆಚ್ಚಾ' ಎಂಬರು !

—ಎಸ್. ಜಿ. ಗಂಗಾಧರ.

ಅಯ್ಯೋ ಮರೆತೆ!

ಒಂದು ದಿನದಲ್ಲಿ ನಾವು ಎಷ್ಟು ಬಾರಿ ಹೀಗೆನ್ನಬೇಕಾಗುತ್ತೆ ಅಂತ ಲೆಖ್ಖ ಇಟ್ಟಿದ್ದೀರಾ? ಬೆಳಗ್ಗೆ ಏಳುತ್ತಲೇ ಮುಂಜಾನೆ ಕಾಫೀಗೆ ಸಕ್ರೆ ಇಲ್ಲ ಅಂತ ಮೂತಿ ಸೊಟ್ಟೆ ಮಾಡೋ ಹೊತ್ತಿಗೆ ಅಯ್ಯೋ ಮರೆತೆ ಅಂತ ಒಳಕ್ಕೆ ಓಡುವ ನಮ್ಮಾಕೆಯರ—ಮೊದಲುಗೊಂಡು ರಾತ್ರಿ ಮಲಗೋಕೆ ಮುಂಚೆ "ಅಲ್ಲಾಂದ್ರೆ, ಮೂರು ದಿನದಿಂದ ಹೇಳ್ತಿದ್ದೀರಲ್ಲಾ, ವೈದ್ಯರು ನಂಗೆ ಹೇಳಿದ ಔಷಧಿ ತರ್ತೀನೀಂತ, ತಂದ್ರಾ" ಅಂತ ಕೇಳಿದ ಕೂಡಲೆ ಕೈ ಕೊಡವಿ ಅಯ್ಯೋ ಮರೆತೆ ಅಂತ ನಾವು ಹೇಳೋವರಿಗೂ, ಎಷ್ಟು ಬಾರಿ ಈ ಮರುವು ಮಂತ್ರ ಜಪಿಸುತ್ತೇವೆ, ಎಷ್ಟು ಬಾರಿ ಕೇಳುತ್ತೇವೆ ಅಂತ ಲೆಖ್ಖ ಇಟ್ರೆ ನಿಜವಾಗ್ಲೂ ನಮ್ಮ ಜಾತೀಗೆ ಎಷ್ಟು ಮರುವು ಅನ್ನಿಸುತ್ತೆ.

ಇವೆಲ್ಲಾ ಏನೋ ದಿನಗಟ್ಲೆ ಸಮಾಚಾರ. ಆದರೆ, ನಾವು ದೊಡ್ಡೋರಾಗ್ತಾ ಆಗ್ತಾ ನಮ್ಮ ಹಿಂದಿನ ಆಟವೆಲ್ಲಾ ನಮಗೆ ಮರೆಯೋದುಂಟು. ನಾನು ಚಿಕ್ಕೋನಾಗಿದ್ದಾಗ ಒಂದ್ಸಲ ಚೆರಂಡೀಲಿ ಬಿದ್ದಹಾಗೆ ಜ್ಞಾಪಕ. ಆದರೆ, ನನ್ನ ಜ್ಞಾಪಕ ಶಕ್ತೀನೇ ನೆಚ್ಚಿಕೊಂಡರೆ ನಾನಿನ್ನೂ—ನಂಗೀವಾಗ ಮೂವತ್ತು ವರ್ಷ—ಅದೇ ಚೆರಂಡೀಲೇ ಬಿದ್ದಿರಬೇಕು. ನಾ ಹೇಗೆದ್ದುಬಂದೆನೊ ನಂಗೆ ಮರೆತೇ ಹೋಗಿದೆ. ಅಂದರೆ ನಮಗೇನೂ ಎಲ್ಲಾನೂ ಮರೆಯೋದಿಲ್ಲ. ನೋಡಿ, ನಾನು ಹುಡುಗನಾಗಿದ್ದಾಗ ನಮ್ಮಪ್ಪ ನನ್ನ ಕೂಡಿಸಿಕೊಂಡು "ಶುದ್ಧಬ್ರಹ್ಮಪರಾತ್ಪರ ರಾಮ", "ಮಾಣಿಕ್ಯವೀಣಾ" ಹಾಗೇ ಇನ್ನೂ ತುಂಬಾ ಶ್ಲೋಕಗಳನ್ನ ಹೇಳಿಕೊಟ್ಟರು. ಈಗ ನನಗೆ ಅವನ್ನೆಲ್ಲಾ ಕಲಿಯೋವಾಗ ತಿಂದ ಬಾಸುಂಡೆ ಏಟುಗಳು ಜ್ಞಾಪಕವಿದೆಯೇ ವಿನಹ ಶ್ಲೋಕಗಳಲ್ಲಿ ಒಂದು ಪಂಕ್ತಿ ನೆನಪಿಲ್ಲ. ಅದೇ ನೋಡಿ ನಾನಿನ್ನೂ ಪ್ರೈಮರೀ ಸ್ಕೂಲಿಗೆ ಕೂಡ ಹೋಗುತ್ತಿರಲಿಲ್ಲ. ಆಗ ನಮ್ಮನೇಗೆ ಒಬ್ಬರು ಬಂದಿದ್ದರು. ನಂಗೆ ಒಂದು ಹಾಡು ಹೇಳಿಕೊಟ್ಟರು.

"ಎಲ್ಲಿ ನನ್ನ ಕುದುರಿಹೋಯ್ತು ವೆಂಕೂ
ಬಾಯೀ ಹುಡುಕಲೇ, ಸೀರೆ ಹೊಸ
ದು ಕೊಡುವೆನಲ್ಲೇ ಹಾರಿ ಹಾರಿ
ಹುಡುಕಲೇ"

ಅಂತ. ಈ ಹಾಡಿನ್ನೂ ನೆನ್ನೆ ಹೇಳಿಕೊಟ್ಟಹಾಗಿದೆ. ನಮ್ಮ ಹುಡುಗರಿಗೆಲ್ಲ ಬಾಯಿಪಾಠ ಮಾಡಿಸಿದ್ದೀನಿ.

ಮರುವಿನ ಗೋಳು ಅಂದರೆ ನಮ್ಮ ಓದೋ ಕಾಲದಲ್ಲಿ ಅದೇನು ಚರಿತ್ರೆಯ ಹೆಸರು, ಇಸವಿಗಳೋ, ಭೂಗೋಳದ ವರ್ಣನೆಯೋ, ಆ ಅಂಕಿಗಳೋ ಅಬ್ಬ! ಅದನ್ನು ನೆನಸಿಕೊಂಡರೆ ಸದ್ಯ! ಯಾವ ದೇವರು ನಮ್ಮಪ್ಪನಿಗೆ ಬುದ್ಧಿ ಕೊಟ್ಟನೋ—ನನ್ನನ್ನ ಸ್ಕೂಲಿಂದ ಬಿಡಿಸೋ ಹಾಗೆ—ಅನ್ನಿಸುತ್ತೆ. ನಂಗೆ, ನಾನ್ಯಾವತ್ತು, ಯಾವ ಹೊತ್ತಿನಲ್ಲಿ, ಎಲ್ಲಿ, ಯಾವ ರಖಂ ನನ್ನ ಮೊದಲನೇ ಸಿಗರೇಟ್ ಸೇದಿದೆ ಅಂತ ಜ್ಞಾಪಕ ಇದ್ದ

ಹಾಗೆ, ಅದ್ಯಾವುದೋ ಸಿಪಾಯಿದಂಗೆ ಆಯ್ತುಂತಲ್ಲಾ ಅದರ ವಿಷಯ ನಾನು ಅಲ್ಲಿ ಇಲ್ಲಿ ಕೇಳಿದ್ದೇನೆಯೇ ಹೊರತು ಓದಿದ್ದು ಜ್ಞಾಪಕವಿಲ್ಲ.

ಎಲ್ಲರಿಗೂ ಒಂದೇ ತರಹ ಈ ಮರುವು ವ್ಯಾಧಿ ಇರುವುದಿಲ್ಲ. ಕೆಲವರು ತಮ್ಮ ಛತ್ರಿಗಳನ್ನು ಮರೆಯುತ್ತಾರೆ, ಕೆಲವರು ಮನೇಲಿ ಬೇಕಾದ ಸಾಮಾನು ತರೋದು ಮರೆಯುತ್ತಾರೆ, ಕೆಲವರು ತಾವು ಕೊಡಬೇಕಾದ ಬಾಕಿಯನ್ನೇ ಮರೀತಾರೆ—ಹೀಗೆ ಇನ್ನೂ ನಾನಾ ತರವಾಗಿ ನಾನಾ ಜನರು ನರಳುತ್ತಾರೆ. ನನಗೆ ತಿಳಿದೋರೊಬ್ಬರು ತಿಥಿ ಊಟಕ್ಕೆ ಹೋದವರು ಪಾಪ, ತಾವು ಹೊಸದಾಗಿ ಕಟ್ಟಿಸಿಕೊಂಡಿದ್ದ ಮೂವತ್ತೆರಡು ಹಲ್ಲನ್ನೂ ಮನೆಯಲ್ಲೇಮರೆತಿದ್ದರು. ಏನು ಮಾಡಿಯಾರು? ನಾನೆದುರುಸಾಲಲ್ಲಿ ಕೂತು, ಉದ್ದಿನೊಡೆ ತಿನ್ನುತ್ತಿದ್ದೆ. ಆತನ ಪಾಡು—ಅವತ್ತೇನಾದರೂ ಆತನಿಗೆ ಹಲ್ಲಿದ್ದಿದ್ದರೆ ಅಲ್ಲಿದ್ದ ಒಡೆಗಳನ್ನೆಲ್ಲಾ ಅವನೇ ತಿನ್ನುತ್ತಿದ್ದನೋ—ಅನ್ನುವ ಹಾಗೆ ಇತ್ತು.

ನಾವು ಮರೆಯೋದೂ, ಮರೀದೇ ಇರೋದೂ ಎರಡೂ ಒಂದೇ ತೂಕ ಅಂತ ಕಾಣುತ್ತೆ. ಹೇಗೆ ಅಂದ್ರೆ? ನಾವು ಕೊಡಬೇಕಾದ್ದು ಮರೆಯೋ ಹಾಗೆ ನಮಗೆ ಬರಬೇಕಾದ್ದು ಮರೆಯೋಲ್ಲ. ನಮಗೆ ಇನ್ನೊಬ್ಬರಿಂದ ಆದ ಉಪಕಾರ ಮರೆಯೋ ಹಾಗೆ ಅವರಿಂದಾದ ತೊಂದರೆ ಮರೆಯುವ ಹಾಗಿಲ್ಲ. ನಾವು ಕೊಟ್ಟ ಮಾತು ಮರೆಯೋ ಹಾಗೆ ಕಟ್ಟಿದ ಹಣ ಮರೆಯೊಲ್ಲ ನನಗೆ ತಿಳಿದೋರೊಬ್ಬರು ಒಬ್ಬ ಹೋಟೆಲ್ ಮಾಲೀಕನಿಗೆ ಒಂದು ಮನೆ ಮಾರಿದರು. ಪಾಪ, ಅದರ ಮೇಲಿನ ಹಣ ಬರೋದು ತಡವಾಯಿತು. ಸರಿ, ಹೇಗಿದ್ದರೂ ಹೋಟೆಲಿತ್ತು ದಿನಕ್ಕೆ ನಾಲ್ಕೈದು ಸಾರಿ ಭರ್ಜರಿ ತಿಂಡಿ ಶುರುವಾಯಿತು. ಮನೆ ಮಾಲೀಕ ಇವೆಲ್ಲಾ ಲೆಖ್ಖ ಏಕೆ ಇಟ್ಟಾನು? ಒಂದು ಮನೆಯೇ ಮಾರಿದ ಮೇಲೆ ಈ ತಿಂಡೀಲಿ ಆದದ್ದೇನು? ಕೊನೆಗೆ ಎರಡು ವರ್ಷವಾದರೂ ಹಣ ಬರಲಿಲ್ಲ ಕಡೆಗೆ ಪಾಪ ಆತ ಹೋಗಿ ಹೋಟೆಲ್ ಆತನ್ನ ಹಣ ಕೇಳಿದರೆ, ಅವನು ಮೆತ್ತಗೆ ಲೆಖ್ಖದ ಪುಸ್ತಕ ಈಚೆಗೆ ತೆಗೆದ ಮನೆಯವನಿಗೆ ಎದೆ ಒಡೆಯಿತು. ತಾನು ತನ್ನ ಮನೇ ಖರೀದಿಗಿಂತ ಜಾಸ್ತಿ ತಿಂಡಿ ತಿಂದು ತೇಗಿದ್ದ! ಕೆಲವರು ತಮ್ಮ ಮರುವನ್ನು ಒಂದು ಕಸುಬಾಗಿ ಮಾಡಿಕೊಳ್ಳುವುದೂ ಉಂಟು. ಅಂಥವರು ತಮ್ಮ ಹಳೇ ಜೋಡು, ಹಳೇ ಛತ್ರಿ ಇವನ್ನು ಮರೆತು, ಒಂದು ಹೊಸ ಜೋಡು, ಒಳ್ಳೆ ಛತ್ರಿಗಳಿಗೆ ಬದಲಾಯಿಸುತ್ತಾರೆ—ಖರ್ಚಿಲ್ಲದೆ ಹೋಟಲಲ್ಲಿ ತಿಂಡಿ ತಿಂದು ಜೇಬಿನಲ್ಲಿ ಬಿಲ್ಲಿಟ್ಟುಕೊಂಡು ಗಲಾಟೆ ಇದ್ರೆ ತಲೆ ಬಗ್ಗಿಸಿ ಬೀದಿ ಕಡೆ ನುಗ್ಗುತ್ತಾರೆ. ಇನ್ನೂ ಸಾಧಾರಣ ಅಂದ್ರೆ ಓದಲಿಕ್ಕೆ ಅಂತ ಪುಸ್ತಕ ಕೊಟ್ರೆ ವಾಪಸ್ ಕೊಡೋದ್ನೇ ಮರೆಯುತ್ತಾರೆ. ಅವರೇನೂ ಕಳ್ಳರಲ್ಲ. ಇನ್ನೇನು ದರೋಡೆ, ತಲೆ ಒಡಿಯೋದು ಇವೆಲ್ಲಾ ಅವರ ತಲೆಗೇ ತೋಚುವುದಿಲ್ಲ. ಏನೋ ಸ್ವಲ್ಪ ಮರುವು ಅಷ್ಟೆ. ಒಟ್ಟಿನಲ್ಲಿ ಮರುವು ಅನ್ನೋದು ನಮಗೊಂದು ಒರಗುದಿಂಬು ಎಂದೂ ಕೈ ಕೊಡದ ಸಾಕ್ಷಿ.

ನಾನು ಒಂದೊಂದು ಭಾನುವಾರ ಹೊಟ್ಟೆ ಭಾರವಾದಾಗ ಈಜಿ ಛೇರಿನಲ್ಲಿ

ಕೊತು ಕೂಕಡಿಸೋದುಂಟು. ಆಗ ನಮ್ಮ ಹುಡುಗರ ಗಲಾಟೇಲಿ ನಿದ್ದೆ ಯೆನೋ ಹತ್ತೊಲ್ಲ. ಆ ಹುಡುಗರನ್ನ ನೋಡಿದರೆ ನನ್ನ ಹುಡುಗತನದ ಆಟ ಜ್ಞಾಪಕಕ್ಕೆ ಬರುತ್ತೆ. ಆ ಆಟ, ಆ ಪೋಲು, ಆ ನನ್ನ ಸ್ನೇಹಿತರು—ಅವೆಲ್ಲ ಒಂದು ಕನಸಿನ ಹಾಗೆ ಕಾಣುತ್ತೆ. ನಿಜ ವಾಗಲೂ ಅವೆಲ್ಲಾ ನಡೆದವೇ? ನಾನು ಪಕ್ಕದಮನೆ ಹಿತ್ತಲಲ್ಲಿ ಸೀಬೇಕಾಯಿ ಕದ್ದೆನೇ? ಛೇ ಇಲ್ಲ. ಆತ ಸುಳ್ಳು ಹೇಳಿದ. ಶಾಮುಭಟ್ರು ಮಡೀಲಿ ತಿಥೀ ಮಾಡಿಸೋಕೆ ಹೋಗುತ್ತಿದ್ದಾಗ ಅವರ ಮೇಲೆ ಕೆಸರು ಎರಚಿದೆನೇ? ಇಲ್ಲ, ನಾನಲ್ಲ ಗೋಪು. ಅಪ್ಪನಿಗೆ ಹಾಗಂತ ಹೇಳಿ ನಾನು ಹೊಡಿಸಲಿಲ್ಲ ಅವನಿಗೆ? ನಮ್ಮ ಸಂಸ್ಕೃತ ಪಂಡಿತರ ಸೀಟ್ ಕೆಳಗೆ ಚಿನ್ಕುರುಳಿ ಪಟಾಕಿ ಇಟ್ಟೋನು ನಾನೇ ಅಲ್ಲವೇ? ಛೇ, ಇವೆಲ್ಲಾ ಏಕಾ ದರೂ ಜ್ಞಾಪಕಕ್ಕೆ ಬರುತ್ತವೋ? ಈಗ ನನಗೇಕೆ ಇಷ್ಟು ಜಂಭ? ನಮ್ಮ ತಾತ ಮುನ್ಸೀಫ್ ಆಗಿದ್ದರು ಅಂತಾನೇ?

ನಮ್ಮ ಮನೇಲಿ ಒಂದು ನಾಯಿತ್ತು. ಅದು ಎಂದೋ ಒಂದು ದಿನ ಮಳೇಲಿ ನೆಂದು ನಮ್ಮನೆ ಬಾಗಿಲಲ್ಲಿ ಬಂದು ಮಲಗಿತ್ತಂತೆ. ಬೆಳಿಗ್ಗೆ ತಂಗಳು ಬಿಸಾ ಡೋಕೆ ಬದಲು ಅದಕ್ಕೆ ಹಾಕಿತು. ಅವತ್ತಿನಿಂದ ನಮ್ಮ ಮನೆಯೇ ಅದರ ಮನೆಯಾಯಿತು. ಬರ್ತಾ, ಬರ್ತಾ, ಮನೇಲಿ ಹೊಂದಿಕೊಂಡು—ಅದೇನೋ ಅದಿದ್ದರೆ ನಮಗೆ ಒಂದು ತರ ಧೈರ್ಯ ವಿದ್ದಹಾಗಿತ್ತು. ಒಂದ್ಸಲ ದೀಪಾವಳೀಲಿ ಅದರ ಬಾಲಕ್ಕೆ ಒಂದು ಸರ ಪಟಾಕಿ ಹತ್ತಿಸಿ ಕಟ್ಟಿದ್ದೆ. ಅದರ ಶಬ್ಧಕ್ಕೆ ಪಾಪ ಆ ನಾಯಿ ನೆಗೆದು, ಕುಣಿದು ವಿಚಿತ್ರ ವಾಗಿ ಆಡಿತು. ಅದರ ಅವಸ್ಥೆ ನೋಡಿ ನಮಗೆ ಎಲ್ಲೂ ಇಲ್ಲದ ಆನಂದ. ನಮ್ಮಜ್ಜಿ ಒಳಗಿದ್ದವರು ಹೊರಕ್ಕೆ ಬಂದು "ಏನ್ರೋ ಇದು ನಿಮ್ಮ ಚೇಷ್ಟೆ. ಆ ನಾಯಿನ್ನ ಏಕ್ರೋ ಗೋಳು ಹೊಯ್ಕೋತ್ತೀರಾ. ಅದಕ್ಕಿಂತಾ ನೀವೇ ನ್ರೋ ಶ್ರೇಷ್ಠ?" ಅಂದರು

ನಾನೋದಿದ ಎಷ್ಟೋ ಪಾಠ ಮರೆತು ಹೋಗಿವೆ. ನಮ್ಮಜ್ಜಿಯ ಆ ಮಾತು ಮರೆತಿಲ್ಲ. ಈಗಲೂ ಕನ್ನಡಿ ನೋಡಿ ದಾಗಲೆಲ್ಲಾ ನಮ್ಮಜ್ಜಿಯ ಜ್ಞಾಪಕಕ್ಕೆ ಬರುತ್ತೆ.

— ಕೇಫ.

"ರಾಕ್ಷಸರ ಪಾತ್ರವನ್ನು ನಮ್ಮವರು ಇನ್ನೂ ಚೆನ್ನಾಗಿ ಅಭಿನಯಿಸಲು ಕಲಿತಿಲ್ಲ" ಎಂದು ಒಬ್ಬರು ಕನ್ನಡಿಗರು ಕೂಗುತ್ತಾರೆ. ಛೇ, ಅವರು ಸದಾ ಪುರಾಣ ಚಿತ್ರಗಳನ್ನೇ ನೋಡುತ್ತಿದ್ದಾರೆಂದು ಕಾಣುತ್ತದೆ.

* *

ನಶೀಬುಳ್ಳ

ರಾಮಯ್ಯನೀಗೊಂದು ಬಿ. ಎಸ್. ಸಿ. ಆದರೂ
ಹುಟ್ಟಿದೊಡನೆಯೆ ಕೂಸು ! ಬಲು ಮುದ್ದು ! ತೊಟ್ಟಿಲೋ
ಬರಿ ಬಿದಿರು.   ಬಡತನದ ಹಟ್ಟಿಯಲಿ ಅಂಬಲಿಯ
ಕುಡಿಯುತ್ತ ಅಂಬೆ ಕಾಲನು ಇಕ್ಕಿ ತೊದಲ ನುಡಿ
ನುಡಿಯುತ್ತ ತಂಗಳನೆ ಬೇಡಿದನು ! ತಿಂಗಳನೆ
ಕೇಳಿದನು ! ಬಿಸ್ಕತ್ತು, ಕರಿಕಡುಬು, ಲಾಡುಗಳ
ಸವಿಯದೆಯೆ ಎಲ್ಲೆಸ್ಸ ಪಾಸ್ಮಾಡಿ, ಫ್ರೀಷಿಪ್ಪ
ದೆಸೆಯಿಂದ ಈಸಿಪೀ ಎಸ್ಸೆಲ್ಸಿ, ಕಾಲೇಜಿ
ನೊಳನುಗ್ಗಿ, ಕಾಲಕ್ಷೇಪವ ಗಳಿಸಿ, ಬಿ. ಎಸ್. ಸಿ.
ಆದವನ ಠೀವಿಯಲಿ ಗೌನಿಕ್ಕಿ ಹುಡ್ಡಿಕ್ಕಿ
ಮುದಿ ತಾಯ ಮನ ತಣಿಸಿ !
ಜಗನ್ಮೋಹನದಿಂದ ಹೊರಬರುವ ಹೊತ್ತಿನಲಿ
" ಇಕೊ ! ನಿನಗೆ ಹುದ್ದೆ ! ಕೊ ! ಕೂಡು ಬಾ ! ಮಾಡು ಬಾ ! "
ಕರೆದವನ ಕರವನ್ನು ಕುಲುಕುತ್ತ ಮಂತ್ರಿಗಳು
ಚಾಕರಿಯ ಕೊಟ್ಟವನ ಬೆನ್ನ ತಟ್ಟುವರೆಂದು
ಕನಸು ಕಾಣುತ್ತಲಿದ್ದ—ಸೋರುವಾ ಹಟ್ಟಿಯಲಿ,
ಸೇರಿದಾ ಶಾಲೆಯಲಿ, ಕಾಲೇಜ ಬೆಂಚಿನಲಿ,
ಲಾಲ್‌ಬಾಗ ಹುಲ್ಲಿನಲಿ, ಸಂಪಂಗಿ ಏರಿಯಲಿ !

ಎಲ್ಲ ಬರಿ ಕನಸಾಯ್ತು !
ಅವರಿವರ ನಾಶ್ರಯಿಸಿ ಆರ್. ಏ. ಯ ಹಿಂದಲೆದು
ಎಲ್. ಸಿ. ಗಳಿಗ್ಗುಲ್‌ಕಿರಿದು ಸಾಕಾಯ್ತು ! ಸುಸ್ತಾಯ್ತು !
ಕಡೆಗೊಬ್ಬರಾರೇಯ ಸೋದರತ್ತೆಯ ಮಗಳ
ಮದುವೆಯಾದರೂ ಕೂಡ ಅಮಿಲ್ದಾರಿ ಬರಲಿಲ್ಲ !
ಆರ್. ಸಿ. ಆಫೀಸಿನಲಿ ಕಾರಕೂನನ ಹುದ್ದೆ ?
ಮುಜರಾಯಿ ? ಪೋಲೀಸು ? ಸರಬರಾಯಿಯ ಶಾಖೆ ?
ಊಹು ಎಂದರು ಎಲ್ಲ !—ಫ್ರೀಷಿಪ್ಪುಕೊಟ್ಟವರು—
ಕಾಲಕ್ಷೇಪವ ಕೊಟ್ಟು ಓದೋದು ಎಂದವರು—
ಮುದಿ ತಾಯ ಮನದಲ್ಲಿ ಗೋಪುರವ ನಟ್ಟವರು—
ಕಡೆಗೊಬ್ಬ ಮಹನೀಯ ಮೇಷ್ಟರಾಗೆಂದನವ !

ಕುರಿ ಕಾಯುವಾ ಕೆಲಸ! ಬಿ. ಎಸ್. ಸಿ. ಮಾಡುವುದೇ?
ದುಗುಡದಲಿ ಮುಳುಮುಳಗಿ ಅತ್ತನಾ ರಾಮಯ್ಯ!
ಈಗತಿಗೆ ಬಂದಿತೆ ಹಾಳು ಬಾಳೆನ್ನುತ್ತ.

ಜೀವವಿಮೆ? ಸಿನಿಮಗಳು? ಪತ್ರಿಕಾ ಬಾತ್ಮಿಗಳು?
ಬೀಡಿಯಂಗಡಿ? ಯಾಕೆ?
ಕಡೆಗೊಂದು ದಿನವವನು ಪೇಪರನು ತಿರುವುತ್ತ
ಥಟ್ಟನೆಯೆ ಕಣ್ದೆರೆದ. ಬಡತನವ ಕಿತ್ತೊಗೆವ
ಕಲ್ಪತರುವೊಂದನವ ಮನದಲ್ಲಿ ಬೆಳೆಸಿದನು
ನಶೀಬುಳ್ಳ ನಾಮವನು ಧರಿಸುತ್ತ ಹೊರಜಗಕೆ
"ಭೂತ ಸಂಚಾರವನು ನಿಲ್ಲಿಸಲು ದಾರಗಳು!
ಪ್ರೇತಗಳು ಬಾರದಲೆ ಧರಿಸಿರೀ ದಾರಗಳ—
ಇಚ್ಛಿಟರನು ಗೆಲ್ಲುವೊಡೆ ಧರಿಸಿರೀ ದಾರಗಳ—
ಮಣ್ಣೆಣ್ಣೆ ಪಡೆಯುವೊಡೆ ಕೊಳ್ಳಿರೀ ದಾರಗಳ—
ಚಿಲ್ಲರೆಯು ಸಿಗಲಿಕ್ಕೆ ಬಲಗೈಯ ತರ್ಜನಿಗೆ
ಬಂಧಿಸಿರಿ ದಾರಗಳ—" ಎಂದೆನುತ ದಿನದಿನವು
ನೂರಾರು ಪೇಪರಲಿ ಜಾಹಿರಾತನು ಕೊಟ್ಟು,
ದಾರದಿಂದಲೆ ಅವನು ಮಹಡಿ ಮನೆ ಕಟ್ಟಿದನು.
ಈಗವನು, ತನ್ನ ಮನೆ ಹೈಕಳಿಗೆ ಅನುದಿನವು
ಪಾಠ ಹೇಳಲು ಬರುವ ಮೇಷ್ಟ್ರಿಗೆ ತಿಂಗಳಿಗೆ
ಐವತ್ತು ರೂಪಾಯಿ ಕೊಡುತಲಿಹ, ನಶೀಬುಳ್ಳ!

ಬೀದಿಯ ಭಿಕಾರಿಯ ಬಾಯಲ್ಲೂ ಸಿನಿಮಾ ಹಾಡು ಪಲುಕುತ್ತಿದೆ;
ಶಾಸ್ತ್ರೀಯ ಸಂಗೀತ ಮೂಲೆಗುಂಪಾಗುತ್ತಿದೆ

(ಮಾಸ ಪತ್ರಿಕೆ)

ನಮ್ಮ ಆಸೆ ನೆರವೇರಿದ ಹಾಗಾಯಿತು. ಬೀದಿ ಭಿಕಾರಿಗಳೆಲ್ಲರೂ ಹಾಡಿ ನಲಿಯಲಿ! ಶಾಸ್ತ್ರೀಯ ಸಂಗೀತ ದೇಶದ ಮೂಲೆ ಮೂಲೆಗಳಲ್ಲೆಲ್ಲಾ ಹರಡಲಿ!

*　　*

ಕವಿಗಳಿಗೆ

ಇದೀಗ ಕವಿಸಮಯ! **ಇಂದೇ ಕವನ ವನಕ್ಕೆ ಕಾಲಿಡಿ!**

ತಲೆ ಕೆರೆದುಕೊಂಡು ಹುಣ್ಣು ಮಾಡಿಕೊಳ್ಳಬೇಡಿ!!

ಕವಿತಾ ಸ್ಪರ್ಧೆಗಳಲ್ಲೂ, ಸಣ್ಣ ಕತೆ ಸ್ಪರ್ಧೆಗಳಲ್ಲೂ, ಸಿರಿಗನ್ನಡವೇಕೆ, ನೀವೇ ಗೆಲ್ಲಬಹುದು.

ಆಧುನಿಕ ವೈಜ್ಞಾನಿಕ ಉಪಮೆಗಳು.	ಗೋಳ್ಗವನದ ಕಂಬನಿಗಳು.
ಸಣ್ಣ ಕತೆಯ ಸಾವಿರ ಕಾಲುಗಳು.	ನೀಳ್ಗವನದ ತುಂಡುಗಳು.
ಹಿಂದೀ ದೂಷಣೆಗಳು.	ಸುಸಂಸ್ಕೃತ ಸಮಾಸಗಳು.
ಮಹೋಪಮೆಗಳ ಚೂರುಪಾರುಗಳು.	ಮಿರುಮಿರುಗುವ ಮೊದಲ ಪಂಕ್ತಿಗಳು.

ಪ್ರೇಮಯಾತನೆಯಿಂದ ಉಕ್ಕಿ ಬಂದು ಭಾವಪೂರಿತ ಪದ್ಯಖಂಡಗಳು!
ನಮ್ಮ ನಾಡಿನ ಉರಿಯ ಕಿರಿಯ ಸಾಹಿತಿಗಳು ಚಿಮ್ಮಿಸಿದ ಕಿಡಿಗಳು!!
ನೂರು ನೂರರಂತೆ ಪೊಟ್ಟಣ ಕಟ್ಟಿ ಮಾರುತ್ತಿದ್ದೇವೆ!!!

ಸೂರ್ಯ ಚಂದ್ರರ ವಿವರಣೆಗಳು..........................ಮಾರು ೧ಕ್ಕೆ ಬೆಲೆ ೧ರೂ.
ಹಕ್ಕಿಗಳ ಹಾಡು (ಕನ್ನಡ ನಾಡಿನ ಯಾವುದಾದರೂ ೧೨ ಹಕ್ಕಿಗಳು) ಮಾರು ೧ಕ್ಕೆ ೧ರೂ.
ಹೂವುಗಳ ಹಾವಭಾವಗಳು ಫಲಪುಷ್ಪ ಇಲಾಖೆಯವರ ಗ್ಯಾರಂಟಿ ಸಹಿತ)
ಮೊಳ ೧ಕ್ಕೆ ೪ ಆಣೆ.
ತುಂ ತುಂ ತುಂ ತುಂ ತುಂ ತುಂ (ಹನ್ನೆರಡು ತುಮ್ಮುಗಳಿಗೆ)........... ಬೆಲೆ ೪ ಆಣೆ.
ಕಗ್ಗಲ್ಲು (ಅರ್ಥವಾಗದ ಕವನ ಪಂಕ್ತಿಗಳು)..........................ಗೇಣು ೧ಕ್ಕೆ ೨ ಆಣೆ.
ಸೀಸ ಪದ್ಯ, ತಾಮ್ರ ಪದ್ಯ, ಇತ್ಯಾದಿ..........................ದರಗಳಿಗೆ ಬರೆಯಿರಿ.
ಶಿಶು ಗೀತೆ..(ಮಕ್ಕಳೊಂದಿಗರಿಗೆ ಮಾತ್ರ ಉಚಿತ)

ನಮಗೆ ಸಾಲ ದೊರೆಯುವುದಿಲ್ಲವಾದ್ದರಿಂದ

ನಾವೂ ಸಾಲ ಕೊಡುವ ಹಾಗಿಲ್ಲ!

ಮ್ಯಾನೇಜರ್,
ಕನ್ನಡ ಕವಿತಾ ಕಾರ್ಖಾನೆ,
"ಕಾಗದ VILLA", ರಗಳೆ ಬೀದಿ, ಒಣಹಳ್ಳಿ.

"ಉಷ್ಣಂ ಉಷ್ಣೇಣ"

ನಾಗರಹಾವಿನ ಹೆಡೆಯಲ್ಲಿ ನಾಗಮಣಿ ಸಿಕ್ಕಿದ ಹಾಗೆ, ಎಂತಹ ಕೆಟ್ಟ ಸನ್ನಿವೇಶವಾದರೂ ಹೇಗಾದರೂ ಒಳ್ಳೆಯದನ್ನೇ ಉಂಟುಮಾಡುತ್ತದೆ. ಕೆಲವು ಸಾರಿ ಒಳ್ಳೆಯದಾಗಬೇಕಾದರೆ, ಸ್ವಲ್ಪ ವಿಳಂಬವಾಗಬಹುದು. ಇನ್ನೂ ಕೆಲವು ಸಾರಿ ಮನುಷ್ಯ ಪ್ರಯತ್ನವೂ ಆಗಬೇಕು. ಹೇಗಾದರೂ ಅಂತ್ಯದಲ್ಲಿ ಒಳ್ಳೆಯದಾಗುತ್ತೆಂಬುದು ಖಂಡಿತ. ಕಾರ್ಮೋಡದಿಂದ ಕೂಡಿದ ಮಳೆಗಾಲವು ಬಂತೆಂದರೆ ಅದರ ಹಿನ್ನೆಲೆಯಲ್ಲೇ ವಸಂತ ಋತುವೂ ಬರುವುದಲ್ಲವೇ.

ನೋಡಿ, ನನ್ನ ಜಾತಕ ಇದಕ್ಕೆ ನಿದರ್ಶನ. ಸಜಾಯೋಗ. ಆದರೆ, ಕುತಂತ್ರ ಜಾತಕ ನೋಡಿದವರೆಲ್ಲಾ ಕಂಬಿ ಹಿಂದಿನ ವಾಸ, ಯೂನಿಫಾರಂ ಉಡುಪು ತಪ್ಪಿದ್ದಲ್ಲ. ಕಠಿಣ ಅಥವಾ ಸಾದಾ ಎಂದೇ ಹೇಳುತ್ತಿದ್ದರು. ಆದರೆ ನನಗೆ ಆದದ್ದೇ ಬೇರೆ. ಅದನ್ನೇ ಹೇಳಹೊರಟಿದ್ದೆ.

ಊರಲ್ಲೆಲ್ಲಾ ಜನರು ಹಣವನ್ನು ಹೇರಳವಾಗಿ ಸಂಪಾದಿಸುತ್ತಿದ್ದಾರೆ. ಗಳು ವ್ಯಾಪಾರಿ ಮೊದಲಾಗಿ, ಮಣ್ಣು, ಕಲ್ಲು, ಬೂದಿ, ತಿಪ್ಪೆ ವ್ಯಾಪಾರ ಮಾಡುವವರೆಲ್ಲಾ ಲಕ್ಷ್ಮೀ ಕಟಾಕ್ಷಕ್ಕೆ ಒಳಗಾಗಿ ಕಡೆಗೆ ಲಕ್ಷ್ಮಿಯನ್ನೇ ಮನೆ ಕೆಲಸಕ್ಕಿಟ್ಟು ಕೊಂಡಿದ್ದಾರೆ. ಅದರಲ್ಲೂ ಸ್ವೈನ್ಯ ಸರಪರಾಜು ವ್ಯಾಪಾರಗಾರರು ಐಂದ್ರಜಾಲೀಕತ್ವ ದಿಂದಲೋ ಎಂಬಂತೆ ಕುಬೇರ ಪುತ್ರರಾಗಿದ್ದಾರೆ. 'ಷೇರು' ವ್ಯಾಪಾರದಲ್ಲಿ ಈ ಸೊಬಗು ದಿವ್ಯವಾದದ್ದು. ಇವತ್ತು ಹತ್ತು ರೂಪಾಯಿದ್ದ ಷೇರು ನಾಳೆ ಇಪ್ಪತ್ತು. ನಾಡಿದ್ದು ಮೂವತ್ತು. ಆ ಮೇಲೆ ಇಪ್ಪತ್ತು. ಸರಿ, ಏರಿದಾಗ ಮಾರುವುದು. ಇಳಿದಾಗ ಕೊಳ್ಳುವುದು. ತಿರುಗಿ ಏರಿದಾಗ ಮಾರುವುದು ನನ್ನ ಸ್ನೇಹಿತನಂದಂತೆ ಇಳಿದಾಗ ಕೊಂಡು, ಏರಿದಾಗ ಮಾರಲು ಜಯವು ಸಿದ್ಧ ಸರ್ವಜ್ಞ.

ಸರಿ, ನನ್ನ ಹತ್ತಿರ ಇದ್ದ ಇಪ್ಪತ್ತು ರೂಪಾಯಿನಲ್ಲಿ ಎರಡು 'ಷೇರು' ಕೊಂಡೆ. ಅದು ಇಪ್ಪತ್ತು ನಾಲ್ಕು ಆದರೆ ಮಾರೋಣ ಎಂದು ನಿರ್ಧರಿಸಿದೆ. ದಿನಾಲೂ ಪತ್ರಿಕೆ ಓದುವುದಕ್ಕೆ ಶುರು. ನಾನು ಕೊಂಡ ಮೂರನೆಯ ದಿನ ಹನ್ನೆರಡಕ್ಕೆ ಬಂತು. ಇನ್ನೂ ಕೊಳ್ಳೋಣ ಎಂದರೆ ಹಣವಿಲ್ಲ. ಇರಲಿ ನೋಡೋಣ ಎಂದೆ. ಇನ್ನೆರಡು ದಿವಸ ಆ ಹಾಳು ಕಂಪನಿಯ ಸುದ್ದಿಯೇ ಇಲ್ಲ. ಇನ್ನೂ ತಾಳ್ಮೆಯಿಂದ ಕಾದೆ. ಹತ್ತು ದಿನವಾದ ಮೇಲೆ, ಪತ್ರಿಕೆಯ ಒಂದು ಪುಟದ ತುಂಬ ಕಂಪೆನಿಯ

ಜಾಹಿರಾತು. ಓಹೋ ನೂರಾಗಿರಬಹುದೋ ಎಂದು ನೋಡಿದೆ. ಜಾಹೀರಾತು ಏನು ಗೊತ್ತೆ. ಕಂಪೆನಿಯು ದಿವಾಳಿಯಾದ್ದು. ನ್ಯಾಯಾಸ್ಥಾನದ ಪರವಾಗಿ ವಕೀಲರು ಹಾಕಿದ್ದ ಜಾಹೀರಾತು.

ಅಲ್ಲಾ 'ಷೇರು' ಕೊಂಡರೇ ಕಂಪೆನಿಯೇ ದಿವಾಳಿಯಾಗಬೇಕೆ?

ಇನ್ನೊಂದು ಬಾರಿ ಹಣವನ್ನು ಫಳಿಸಬೇಕಾದರೆ, ಕುದುರೇ ಜೂಜೇ ಚೆನ್ನ ಎಂದರು ಸ್ನೇಹಿತರು. ಲಕ್ಷ್ಮಿಯು ಕುದುರೆ ವಾಹನಳೆಂದೂ, ಮನುಷ್ಯರಿಗಿಂತ ಅವಳಿಗೆ ಕುದುರೆ ಪ್ರಿಯವೆಂದೂ, ಕುದುರೆಗಳೆಡೆಯಲ್ಲಿ ಅವಳು ಹೌಹಾರಿ ಹಾರಾಡುವ ಳೆಂದೂ, ಲೋಕಜ್ಞರು ಹೇಳಿದರು. ಸರಿ, ಇದೂ ಒಂದು ಕೈ ನೋಡಿಯೇ ಬಿಡೋಣ ಎಂದು ಕುದುರೆ ಜೂಜಿಗೆ ಹೋದೆ. ಒಂದು ಕುದುರೆಯು ಮೊದಲ ನೆಯ ಪಂದ್ಯದಲ್ಲಿ ಖಂಡಿತ ಮೊದಲು ಬರುವುದೆಂದು ಜನರು ಹೇಳುತ್ತಿದ್ದರು. ನನ್ನದೂ ಒಂದು ರೂಪಾಯಿ ಹಾಕಿದೆ. ಪಂದ್ಯವೂ ಆರಂಭವಾಯಿತು. ಕುದು ರೆಯು ಎಲ್ಲಾ ಕುದುರೆಗಳನ್ನೂ ಹಿಂದೆ ಬಿಟ್ಟು ಮುಂದೆ ಬಂತು. ಇನ್ನೇನು ಗೆಲ್ಲಬೇಕು? ಏನು ಮಾಡಿತು ಗೊತ್ತೆ ಆಗ.

ಯಾರೋ ಲೂಸನ್ ಕಂತೆಯೊಂದನ್ನು ಪಕ್ಕದಲ್ಲಿ ಹಾಕಿದ್ದರಂತೆ. ಪಂದ್ಯ ಓಡುವುದನ್ನು ಬಿಟ್ಟು ಅದರ ಹತ್ತಿರ ಹೋಗಿ ಸಾವಧಾನವಾಗಿ ತಿನ್ನುತ್ತಾ ನಿಂತಿತು. ಸವಾರನು ಏನು ಮಾಡಿದರೂ ಸಾರ್ಥಕವಾಗಲಿಲ್ಲ. ಕಡೆಗೆ ಅವನೇ ಓಡಿ ಹೋಗಿ ಮೊದಲನೆಯವನಾದ. ಆದರೆ, ಕುದುರೆಗೆ ಮೊದಲನೆಯ ಸ್ಥಾನವು ಬರಲಿಲ್ಲ ವೆಂದರು. ನನ್ನ ರೂಪಾಯಿ ಕುದುರೇ ಬಾಲದ ಹಿಂದೆಯೇ ಹೋಯಿತು. ಇವತ್ತಿಗೂ ನನಗೆ ಅನುಮಾನ ಹಾಗೆ ಬುದ್ಧಿ ಬರುವುದಕ್ಕೆ ನನ್ನ ರೂಪಾಯೇ ಕಾರಣ ಎಂದು.

ಇದನ್ನೆಲ್ಲಾ ಯೋಚಿಸಿ ನಾನೀಗ ಒಂದು ಉಪಾಯ ಹೂಡಿದ್ದೇನೆ. ಮೈಸೂರು ಬ್ಯಾಂಕು ಉತ್ತಮ ಸ್ಥಿತಿಯಲ್ಲಿದೆ. ಅದರ ಅಧ್ಯಕ್ಷರಿಗೆ ಒಂದು ಕಾಗದ ಬರೆಯುವುದು ನನ್ನ ಜಾತಕ ಫಲ ನನ್ನ ಅನುಭವ, ಇವುಗಳನ್ನು ತಿಳಿಸುವುದು. ಒಂದು ಸಾವಿರ ರೂಪಾಯಿ ಬಹುಮಾನ ಕೊಟ್ಟರೆ ಸರಿ, ಇಲ್ಲದಿದ್ದರೆ ನಿಮ್ಮ ಬ್ಯಾಂಕಿನ ಒಂದು ಷೇರನ್ನು ಕೊಳ್ಳುತ್ತೇನೆ ಎಂದು ಹೆದರಿಸುವುದು. ಬ್ಯಾಂಕಿನ ಮುಂದುವರಿಕೆಯನ್ನು ಆತನೇನಾದರೂ ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಖಂಡಿತ ಸಾವಿರ ರೂಪಾಯಿ ಕೊಟ್ಟು ಬದುಕಿದೆ ಎನ್ನುತ್ತಾನೆ. ಇಲ್ಲದಿದ್ದರೆ, ಬ್ಯಾಂಕಿನ ಗತಿ ಗೊತ್ತೇ ಇದೆ.

ಇಂತಹ ಸಂಸ್ಥೆಗಳೆಷ್ಟೋ ಇವೆ. ನನ್ನ ಜೀವನ ಸುಗಮ.

* * *

ಕೊರವಂಜಿ ಸಂಪಾದಕರಲ್ಲಿ ಸಪ್ರೇಮ ವಂದನೆಗಳು,

ಪ್ರಿಯರೇ, ನನ್ನ ಹೀನದೃಷ್ಟವೇ ನನ್ನನ್ನು ಕಾಯುವ ಈ ಜೀವನ ಕತೆಯನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಕಳಿಸಿದ್ದೇನೆ. ಕೆಲವು ವಾರಗಳ ಹಿಂದೆ ದೈನಂದಿನ ಪತ್ರಿಕೆಯೊಂದಕ್ಕೆ ಇದನ್ನೇ ಕಳಿಸಿದ್ದೆ. ಅವರು ಪ್ರಕಟಿಸಲು ನಿರಾಕರಿಸಿದರು. ಮುಂದಿನ ವಿಚಾರ ನಿಮಗೆ ಗೊತ್ತೇ ಇದೆ. ದೈನಂದಿನ ಪತ್ರಿಕೆಯು ನಿಲ್ಲಿಸಲ್ಪಟ್ಟಿತು. ಅದರ ಸಂಪಾದಕರು ಸ್ಥಾನಭ್ರಷ್ಟರಾದರು. ಅಚ್ಚು ಕೂಟದವರು ಓಟ ಕಿತ್ತರು. ನಿಮ್ಮ ಏಳಿಗೆಯ ದೃಷ್ಟಿಯಿಂದಲೇ ನೀವು ಇದನ್ನು ಪ್ರಕಟಿಸಿ. ಇಲ್ಲವಾದರೆ, ಮುಂದಾಗುವ ಅನಾಹುತಗಳಿಗೆ ನಾನು ಜವಾಬ್ದಾರನಲ್ಲ.

ಇತಿ ನಿಮ್ಮವ.

[ಈ ಲೇಖನದ ಪ್ರಕಟನೆಗೆ ಕಾರಣವನ್ನೇನೂ ಕೊಡಬೇಕಾಗಿಲ್ಲ—ಶುದ್ಧ ಹೆದರಿಕೆ.]

—ಸಂ.

ಆಲ್‌ಜೀರಿಯಾದಲ್ಲಿ ಒಂದು ಕರೀ ನೀರಿನ ನದಿ ಹರಿಯುತ್ತಿದೆ ಎಂದೂ ಆ ನೀರನ್ನು ಶಾಯಿಯಂತೆ ಉಪಯೋಗಿಸಬಹುದೆಂದೂ ಈಗ ತಿಳಿದು ಬಂದಿದೆ. ಆ ನದಿಯಲ್ಲಿ ಅಕಸ್ಮಾತ್ತಾಗಿ ಬಿದ್ದ ಹಲವರು ಭಾರತೀಯ ಸೈನಿಕರನ್ನು ನಾವು ಆಗಲೇ ಕಂಡಿದೇವೆ.

ದಕ್ಷಿಣ ಆಫ್ರಿಕಾದ ಪ್ರಿಟೋರಿಯಾ ಮತ್ತು ಜೊಹಾನೆಸ್‌ಬರ್ಗ್ ನಗರಗಳಲ್ಲಿ ಭಾರತೀಯರು ಯಾರೂ ಫುಟ್‌ಪಾತ್‌ಗಳ ಮೇಲೆ ನಡೆಯಕೂಡದೆಂಬ ಆಜ್ಞೆ ಇದೆಯಂತೆ. ಮಾದರಿ ಮೈಸೂರಿನ ಪದ್ಧತಿಯನ್ನೇ ಅವರು ಅಲ್ಲಿ ಒತ್ತಾಯ ಪಡಿಸಿರುವಂತೆ ತೋರುತ್ತದೆ.

*   *

ದೊಡ್ಡವರು ಹಾಲು ಕುಡಿಯಕೂಡದೆಂದು ಒಬ್ಬರು ಅಮೇರಿಕ ಡಾಕ್ಟರು ಅಭಿಪ್ರಾಯ ಪಟ್ಟಿರುವರಂತೆ. ಈಶ್ವರ ಸಂಕಲ್ಪವೇ ಹಾಗೆ!

*   *

ಮನೆಗೊಂದು ನಾಮ

ನಮ್ಮದು ಮಾದರಿ ಸಂಸ್ಥಾನ. ಬೆಂಗಳೂರು ಮಾದರಿ ಸಂಸ್ಥಾನದ ರಾಜಧಾನಿ. ಪ್ರವೃತ್ತಿ ಮಾರ್ಗದ ಶ್ರಮಸ್ಥಾನ; ನಿವೃತ್ತಿ ಮಾರ್ಗದ ಆಶ್ರಮಸ್ಥಾನ. ಅಧಿಕಾರಿಗಳ ಆವಾಸಸ್ಥಾನ; ಅನಧಿಕಾರಿಗಳ ಅನಾಯಾಸಸ್ಥಾನ. ಕಲ್ಯಾಣಪುರಿ. ದಿನದಿನವೂ ನೂರಾರು ಹೊಸ ಸೌಧಗಳು ನಿರ್ಮಿತವಾಗುವ ಕರ್ಮಾಗಾರ. ಮನೆ ಅಂದ ಮೇಲೆ, ನಾಮ ಇದ್ದೇ ಇರಬೇಕು; ಆಗಿಯೇ ತೀರಬೇಕು. ನಮೂನಮೂನೆಯ ಹೆಸರುಗಳಿವೆ ನಮ್ಮೂರಲ್ಲಿ. ಅವುಗಳ ಪಟ್ಟಿಯೊಂದನ್ನು ಕೂಡಲೇ ತಯಾರಿಸಬೇಕೆಂಬ ಸಲಹೆ ಇಷ್ಟರಲ್ಲೇ ನಗರ ಪಿತೃಗಳ ಮುಂದೆ ಬರಲಿದೆ. ಆದರೆ ಹೆಸರುಗಳ ಪಟ್ಟಿಯೊಂದನ್ನು ಮಾತ್ರ ತಯಾರಿಸಿದರೆ ಸಾಲದು; ಆ ಹೆಸರನ್ನು ಕೊಡಲು ಕಾರಣವೇನು? ಅದರ ಮೂಢಾರ್ಥ ಗೂಢಾರ್ಥಗಳೇನು? ಎಂಬುದನ್ನೂ ತಿಳಿದು ತಿಳಿಸಿದರೆ ಒಳ್ಳೆಯದು. ಏಕೆಂದರೆ, ನಮ್ಮೂರಲ್ಲಿ ಬೀದಿಯಲ್ಲೇ ಇರುವ ಹಲವು ಹೆಸರುಗಳ ವಿಷಯವಾಗಿ ಈ ರೀತಿ ನಾವು ವಿಚಾರಣೆ ಮಾಡಿದಾಗ ಕೆಳಗೆ ಕಂಡ ಅಂಶಗಳು ಹೊರಬಿದ್ದುವು.

ಪಶ್ಚಿಮವಾಹಿನಿ— ಈ ಹೆಸರಿನ ಮನೆ ಮಾಲೀಕರಿಗೆ ಮೊದಲನೆಯ ಮದುವೆ ನಡೆದದ್ದು ಪಶ್ಚಿಮವಾಹಿನಿಯಲ್ಲೇ! ಆಕೆ ತೀರಿಹೋಗಿ ಆತ ಮತ್ತೆ ಗೃಹಸ್ಥಾಶ್ರಮವನ್ನು ಹೊಕ್ಕಿದ್ದೂ ಪಶ್ಚಿಮವಾಹಿನಿಯಲ್ಲೇ. ಈಗ ಆಕೆಗೆ ಬಾಣಂತಿ ಕ್ಷಯವಂತೆ. ಆದ್ದರಿಂದ, ಮನೆ ಹೆಸರನ್ನು ಉಳಿಸುವುದಕ್ಕಾಗಿ ಮುಂದಿನದನ್ನೂ ಅವರು ಅಲ್ಲೇ ನೆರವೇರಿಸುತ್ತಾರಂತೆ.

ಸುಬ್ಬುಚ್ಚಿ ಗೂಡು—ಸುಬ್ಬಿ ಎಂಬ ತನ್ನ ಪತ್ನಿಯ ಮೇಲಿನ ಪ್ರೀತಿ ಪ್ರೇಮಗಳ ಗುರುತಿಗಾಗಿ ಅವಳಿಗೋಸ್ಕರ ಕಟ್ಟಿಸಿಕೊಟ್ಟ ಮನೆಯ ಹೆಸರಿದು ಧ್ವನಿ ಚೆನ್ನಾಗಿದೆ. (ಸೋನೆ, ಫಜೀತ್, ಲೋಲಕ್ ಮುಂತಾದ ಹೆಸರುಗಳೂ ಇವೆ.)

ಚಂಮರಿ — ಚಂಪಾಬಾಯಿ ಎಂಬ ಸತಿಯೂ, ಮರಿರಾಯರೆಂಬ ಪತಿಯೂ ವಾಸಮಾಡುವ ಗೃಹ. ಹೆಸರು ಮುದ್ದಾಗಿದೆ. ಸತಿ ಪ್ರಾಧಾನ್ಯವಾದ ದಾಂಪತ್ಯ. (ಲೀಲಾಹುಲಿ, ಲಲಿತಗುಂಡು, ಗೌರೀಮಂಗ ಮುಂತಾದ ಹೆಸರುಗಳೂ ಇಂಥವೆ.)

ಸಿರಿಗನ್ನಡಂ—ಮನೆಯ ಮಾಲೀಕರ ಭ್ರಾಂತಿಯ ಗುರುತು. ತನಗೆ ತೋಚಿದ ವಸ್ತುವನ್ನು ಬೀದಿಗೆಳೆದು ಬಿಸಿಲು ಮಳೆಗಳಲ್ಲಿ ನಿಲ್ಲಿಸುವ ಸ್ವಾತಂತ್ರ್ಯ ತನಗಿದೆ ಎಂದು ತೋರಿಸಲು ಇಂಥ ಹೆಸರುಗಳನ್ನು ಅನೇಕರು ಹೊರಗಡೆ ಗೋಡೆಯಲ್ಲಿ ಕೆತ್ತಿಸುತ್ತಾರೆ. (ಶತಪಥ, ಶಬ್ದಮಣಿ ತರ್ಪಣ, ತ್ಯಾಗಬ್ರಹ್ಮ, ಗೋರಾ ಬೋರಾ ಇತ್ಯಾದಿ)

ಪೀಪಾ—ತಮ್ಮ ಸಂಪದಭಿವೃದ್ಧಿಗೆ ಕಾರಣಭೂತವಾದ ಪದಾರ್ಥವನ್ನು ಸ್ಮರಿಸುವುದಕ್ಕಾಗಿ ಅನೇಕರು ಮನೆಗೆ ಅದೇ ನಾಮವನ್ನು ಇಡುತ್ತಾರೆ. ಸೇಂದಿ ಕಂಟ್ರಾಕ್ಟರುಗಳು ಪೀಪಾ, ಸುರಾ, ತಾಲವನ ಎಂದೂ, ಹೋಟಲು ಮಾಲೀಕರು ಚಿಕರಿ ನಿಯೋಕೂವಂ ಉದರ ವೇದನಾ ಎಂದೂ ಹೆಸರಿಡುವುದು ಸಹಜವಾಗಿದೆ.

ನಾಯಿಗ—ಮನೆಯನ್ನು ಕೊಂಡುಕೊಂಡಾಗ, ಹಿಂದಿನ ಮಾಲೀಕರು ಹಾಕಿಸಿದ್ದ ನಾಯಿಗಳಿವೆ ಎಚ್ಚರಿಕೆ ಎಂಬ ಹಲಗೆ ತುಂಡಿನಲ್ಲಿ ಉಳಿದ ಅಕ್ಷರಗಳು ಅಳಿಸಿ ಹೋಗಿದ್ದರಿಂದ ನಾಯಿಗ ಎಂಬುದೇ ಸಾಕು. ಅದನ್ನೇ ಮನೆ ಹೆಸರಾಗಿ ಇಟ್ಟು ಕೊಳ್ಳೋಣ ಎಂಬ ಮಿತವ್ಯಯದ ಮಹತ್ವಾಕಾಂಕ್ಷೆ. (ಚೀಟಿ ಅಂಟಿಸಬಾರದು ಎಂಬುದರ ಅವಶೇಷ. "ಟಿಸಬಾ"; "ಬಾಡಿಗೆಗೆ" ಎಂಬುದರ ಅವಶೇಷವಾದ ಬಾಡಿ ಎಂಬುದನ್ನು "ಚಾಡಿ" ಎಂದು ತಿದ್ದಿದ್ದೂ ಉಂಟು.)

ನೋಡೆ! ಇವತ್ತು ಎಂತಹ ವಿಪತ್ತು ಬಂತು ಅಂತೀಯಾ! ಅರ್ಧ ದಾರಿಯಲ್ಲಿ ಒಬ್ಬ ಕಳ್ಳ ಸಿಕ್ಕಿ, ಪ್ರಾಣಕೊಡುತ್ತೀಯಾ? ಪರ್ಸ್ ಕೊಡುತ್ತೀಯಾ? ಅಂತ ಗದರಿಸಿದ........

ಸರಿ! ನೀವು ಬೆಪ್ಪುತಕ್ಕಡಿಯ ಹಾಗೆ ಪರ್ಸ್ ಕೊಟ್ಟುಬಿಟ್ಟಿರಿ! ಅಷ್ಟೆ ತಾನೆ?

*   *

"ತರಗತಿಗಳಲ್ಲಿ ಉಪಾಧ್ಯಾಯರುಗಳು ಬರಸುವ ನೋಟ್ಸನ್ನು ಹಾಗೆಯೇ ಉರು ಹೊಡೆದು ಉತ್ತರ ಬರೆದರೆ ಅದಕ್ಕೆ ಸೊನ್ನೆ ಬೆಲೆಯನ್ನು ಕೊಡಲಾಗುತ್ತದೆ."

(ವಿಶ್ವವಿದ್ಯಾನಿಲಯದ ಪ್ರಕಟಣೆ)

ಕಡೆಗೂ ಅಧಿಕಾರಿಗಳು ಉಪಾಧ್ಯಾಯರುಗಳ 'ನೋಟ್ಸ್'ಗೆ ಸರಿಯಾಗಿ ಬೆಲೆ ಕಟ್ಟಿದರಲ್ಲಾ!

*   *

ಬ್ರಿಟಿಷಿನವರು ಹಲವರು ಅರಶಿನ ಕಾಮಾಲೆ ವಾಸಿಯಾಗಲು ಒಂದು ಜೇಡರ ಹುಳವನ್ನು ಬೆಣ್ಣೆಯೊಳಗಿಟ್ಟು ನುಂಗುತ್ತಾರೆ. ನಮ್ಮಲ್ಲಿ ಅನೇಕರು ಅರಶಿನ ಕಾಮಾಲೆಯಿಂದ ನರಳದೇ ಇರುವುದಕ್ಕೆ ಇದೇ ಕಾರಣವಿರಬಹುದು. ಹೋಟೆಲುಗಳಿಂದ ಆರೋಗ್ಯ ಕೆಡುತ್ತದೆ ಎಂಬುವರು ಇದನ್ನರಿತಾದರೂ ಸುಮ್ಮನಿರುವರೆ?

ನವೀನ ಗಾದೆಗಳು

(ಪತ್ರಿಕೋದ್ಯೋಗಿಗಳದು)

ಸಂಜೆ ಹೊತ್ತಿಗೆ ಮೂರು ಹಾಳೆ ತುಂಬಿದರಾಯಿತು.

✤ ✤ ✤

ಹಿತ್ತಲಗಿಡ ಮದ್ದಲ್ಲ—ಸ್ಥಳೀಯ ಪತ್ರಿಕೆ ಸೊಗಸಲ್ಲ.

✤ ✤ ✤

ಪತ್ರಿಕೋದ್ಯೋಗಿಗಳಿಗೆ ಒಡಲೆಲ್ಲಾ ಚೆನ್ನ—ಕಿಶೆ ಮಾತ್ರ ಶೂನ್ಯ.

✤ ✤ ✤

ಆಪದ್ಧೋವಾ-ಸುಪದ್ಧೋವಾ—ಗರಮಾಗರಂ ಸುದ್ದಿ ಬಂದಿದ್ದೆಲ್ಲಾ ಒಂದು.

✤ ✤ ✤

ಕಾಗದದ ಬೆಲೆ ನೋಡಿದರೆ—ಮಾಸ ಪತ್ರಿಕೆಗಳೂ ವಾಷಿಕಕ್ಕೆ ಸಿದ್ಧವಾಗ ಬಹುದು.

✤ ✤ ✤

ವಂಶಕ್ಕೊಂದು ಕೊಡಲಿ ಕಾವು ಎಂಬಂತೆ—ಪತ್ರಿಕೋದ್ಯೋಗವನ್ನೇ ಪತ್ರಿಕೆಗಾದಿಸಬಹುದೇ?

✤ ✤ ✤

ಕಚ್ಚೋ ನಾಯಿ ಬೊಗಳೊಲ್ಲ—ಬೊಗಳೊ ಪತ್ರಿಕೆ ಕಚ್ಚೊಲ್ಲ.

✤ ✤ ✤

ಬಿಸಿ ಸುದ್ದಿ ಅಂತ ಓದಿದರೆ—ತಂಗಳು ವಾಸನೆ ಬರೋದೆ?

✤ ✤ ✤

ಹೊತ್ತಲ್ಲದ ಹೊತ್ತಲ್ಲಿ, ಅಚ್ಚು ಒತ್ತೋಕ್ಕೆ ಶುರುಮಾಡಿದರು.

✤ ✤ ✤

ಪತ್ರಿಕೆಗಳಿಗೆ ಅಧಿಕಾರದ 'ಗೀತಾ' ಹುಕುಂ

"ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ"

✤ ✤ ✤

ಭಕ್ತರಾಜ್

ವಿಷ್ಣುಪಂತ್ ಪಾಗ್ನೀಸ್, ವಾಸಂತಿ, ಕೌಸಲ್ಯ,
ಮುಬಾರಕ್ ಇತ್ಯಾದಿ ನಟವರ್ಗ

●

ದೀಪಾವಳಿಯ ಸುಮುಹೂರ್ತದಲ್ಲಿ

ಗುಡ್‌ವಿನ್ ಪಿಕ್ಚರ್ಸ್ ಕಾರ್ಪೊರೇಷನ್‌ರವರಿಂದ
ಪ್ರೇಕ್ಷಕರಿಗೆ ಕಾಣಿಕೆ

ನಗರದ ಪ್ಯಾರಾಮೌಂಟ್ ಥಿಯೇಟರಿನಲ್ಲಿ

ತಾ|| 28–10–43ರಿಂದ ಪ್ರಾರಂಭ

ವಿವರಗಳಿಗೆ:

ಗುಡ್‌ವಿನ್ ಪಿಕ್ಚರ್ಸ್ ಕಾರ್ಪೊರೇಷನ್

ಬೆಂಗಳೂರು – ಬೆಜವಾಡ – ತಿರುಚನಾಪಳ್ಳಿ – ಎರ್ನಾಕುಲಂ.

— ಬರೆಯಿರಿ.

Printed by B. S. Iyengar, Bangalore City.
Publisher—B. N. Gupta, Editor—M. SHIVARAM.